**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/230/2018/ARE-14

Multi Storied Building,
Dr. B.R. Ambedkar Veedhi,
Bengaluru-560 001
Date: **26/11/2021**

**RECOMMENDATION**

Sub:- Departmental inquiry against;

1) Sri G. Lohith, Executive Officer, Taluk Panchayath, Shikaripur Taluk, Shivamogga District (Presently working as District Adult Education Officer, Yadgir District, Yadgir)
2) Sri H.B. Chidananda, Panchayath Development Officer, Gama Grama Panchayath, Shikaripur Taluk, Shivamogga District – Reg.

Ref:- 1) Govt. Order No.ಗ್ರಾಅಪ 77 ಏಸೇಬಿ 2018, Bengaluru dated 2/4/2018.

2) Nomination order No.UPLOK-2/DE/230/2018, Bengaluru dated 15/5/2018 of Upalokayukta, State of Karnataka, Bengaluru
3) Inquiry Report dated 18/11/2021 of Additional Registrar of Enquiries-14, Karnataka Lokayukta, Bengaluru

----

The Government by its order dated 2/4/2018 initiated the disciplinary proceedings against (1) Sri G. Lohith, Executive Officer, Taluk Panchayath, Shikaripur, Shivamogga District (Presently working as District Adult Education Officer, Yadgir District, Yadgir) and (2) Sri H.B.Chidananda, Panchayath Development Officer Gama Grama Panchayath, Shikaripur Taluk, Shivamogga District (hereinafter referred to as Delinquent Government Officials 1 & 2, for short as DGO-1 and DGO-2 respectively) and entrusted the Departmental Inquiry to this Institution.

2. This Institution by Nomination Order No.UPLOK-2/DE/230/2018 Bengaluru dated 15/5/2018 nominated Additional Registrar of Enquiries-7, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs 1 & 2 for the alleged charge of misconduct, said to have been committed by them. Subsequently, by Order No. UPLOK-1&2/DE/Transfers/2018, dated 6/8/2018, the Additional Registrar of Enquiries-14, Karnataka Lokayukta, Bengaluru was re-nominated as inquiry officer to conduct departmental inquiry against DGOs 1 & 2.

3. The DGO-1 Sri G. Lohith, Executive Officer, Taluk Panchayath, Shikaripur, Shivamogga District (Presently working as District Adult Education Officer, Yadgir District, Yadgir) and DGO-2 Sri H.B.Chidananda, Panchayath Development Officer Gama Grama Panchayath, Shikaripur Taluk, Shivamogga District were tried for the following charges:-

ಅ) 1ನೇ ಆ.ಸ.ನೌ.ರ ಶ್ರೀ.ಜಿ.ಲೋಹಿತ್ ಆದ ನೀವು ಕಾರ್ಯನಿರ್ವಾಹಕ ಅಧಿಕಾರಿಯಾಗಿ ತಾಲ್ಲೂಕು ಪಂಚಾಯತ್, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಹಾಗೂ 2ನೇ ಆ.ಸ.ನೌ.ರ ಶ್ರೀ.ಹೆಚ್.ಬಿ.ಚಿದಾನಂದ ಆದ ನೀವು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಗಾಮ ಗ್ರಾಮ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಪೊದೆ ಮತ್ತು ಕಳೆ ನಿರ್ವಹಣೆಯಲ್ಲಿ ಚದರ ಮೀಟರ್‌ಗೆ ಬದಲು ಘನ ಮೀಟರ್‌ನಂತೆ ಲೆಕ್ಕ ಮಾಡಿ ಹೆಚ್ಚುವರಿಯಾಗಿ ರೂ.23,533/-ನ್ನು ವಸೂಲು ಮಾಡಿ ಹಾಗೂ ಕೆರೆಯಲ್ಲಿ ನಿರ್ವಹಿಸಿದ ಕಾಲುವೆಯ ದರವನ್ನು ಬಿಲ್‌ನಲ್ಲಿ ನಮೂದಿಸುವಾಗ ಹೆಚ್ಚುವರಿಯಾಗಿ ರೂ.8,875/-ನ್ನು ವಸೂಲು ಮಾಡಿ ಕರ್ತವ್ಯಲೋಪ ಹಾಗೂ ದುರ್ವರ್ತನೆ ಎಸಗಿರುತ್ತೀರಿ.

ಆ) ಅದೇ ರೀತಿ, 1 ಮತ್ತು 2ನೇ ಆ.ಸ.ನೌ.ರರಾದ ನೀವು ಹೆಚ್ಚುವರಿ ಮೊತ್ತ ರೂ.32,408/-ನ್ನು ಪಾವತಿಸುವಾಗ ಸರಿಯಾಗಿ ಪರಿಶೀಲಿಸದೇ ಹಣ ನೀಡಿದ್ದು, ಸದರಿ ಹೆಚ್ಚುವರಿ ಮೊತ್ತವನ್ನು ಕಂತಿನ ಮೂಲಕ ವಸೂಲು ಮಾಡಿ ಕರ್ತವ್ಯಲೋಪ ಹಾಗೂ ದುರ್ವರ್ತನೆ ಎಸಗಿರುತ್ತೀರಿ.

ಇ) ಅದೇ ರೀತಿ, 1 ಮತ್ತು 2ನೇ ಆ.ಸ.ನೌ.ರರಾದ ನೀವು ಸದರಿ ಕಾಮಗಾರಿಗಳ ನಿರ್ವಹಣೆ ಮಾಡಿರುವ ಬಗ್ಗೆ ಹಾಗೂ ಹಣ ಖರ್ಚು ಮಾಡಿರುವ ಬಗ್ಗೆ ಪೂರಕ ದಾಖಲೆಗಳನ್ನು ಸಲ್ಲಿಸದೇ, ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ಕಾಮಗಾರಿಯನ್ನು ಮಾನವ ಸಂಪನ್ಮೂಲದ ಮೂಲಕ ನಿರ್ವಹಣೆ ಮಾಡಿರುವ ಬಗ್ಗೆ ಸದರಿ ಕಾರ್ಮಿಕರು ಜಾಬ್ ಕಾರ್ಡ್ ಹೊಂದಿರುವ ಬಗ್ಗೆ ಅವರ ಖಾತೆಗೆ ಕೂಲಿ ಹಣ ಜಮಾ ಆಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸದೇ ಕರ್ತವ್ಯಲೋಪ ಹಾಗೂ ದುರ್ವರ್ತನೆ ಎಸಗಿರುತ್ತೀರಿ.

ಈ) ಅದೇ ರೀತಿ, 1 ಮತ್ತು 2ನೇ ಆ.ಸ.ನೌ.ರರಾದ ನೀವು ಸದರಿ ಕಾಮಗಾರಿಗಳನ್ನು ನಿರ್ವಹಣೆ ಮಾಡುವ ಸಂದರ್ಭದಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯಲ್ಲಿ ಹೇಳಲಾದ ಮಾರ್ಗಸೂಚಿಗಳನ್ನು ಸರಿಯಾಗಿ ಪಾಲಿಸದೇ ಕರ್ತವ್ಯಲೋಪ ಹಾಗೂ ದುರ್ವರ್ತನೆ ಎಸಗಿರುತ್ತೀರಿ.

ನೀವು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ."

4. The Inquiry Officer (Additional Registrar of Enquiries-14) on proper appreciation of oral and documentary evidence has held that the Disciplinary Authority has failed to prove the above charges against DGO-1 Sri G. Lohith, Executive Officer, Taluk Panchayath, Shikaripur, Shivamogga District (Presently working as District Adult Education Officer, Yadgir District, Yadgir) and the Disciplinary Authority has proved the above charges against DGO-2 Sri H.B.Chidananda, Panchayath Development Officer Gama Grama Panchayath, Shikaripur Taluk, Shivamogga District.

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is

hereby recommended to the Government to accept the report of Inquiry Officer.

6. As per the First Oral Statement submitted by DGO-2, he is due to retire from service on 31/5/2044.

7. It is hereby recommended to the Government to exonerate the DGO-1 Sri G. Lohith, Executive Officer, Taluk Panchayath, Shikaripur, Shivamogga District (Presently working as District Adult Education Officer, Yadgir District, Yadgir) from the aforesaid charges.

8. Having regard to the nature of charges proved against DGO-2 Sri H.B.Chidananda, Panchayath Development Officer Gama Grama Panchayath, Shikaripur Taluk, Shivamogga District, it is hereby recommended to the Government for imposing penalty of withholding two annual increments payable to DGO-2 Sri H.B. Chidananda with cumulative effect.

9. Action taken in the matter shall be intimated to this Authority.

Connected records are enclosed herewith.

26/11/21

**(JUSTICE B.S.PATIL)**
Upalokayukta,
State of Karnataka,
Bengaluru

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ–230/2018/ಎ.ಆರ್.ಇ–14

ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 18/11/2021.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ (1) ಶ್ರೀ. **ಜಿ ಲೋಹಿತ್,** ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿಕಾರಿಪುರ (ಪ್ರಸ್ತುತ ಯಾದಗಿರಿ ಜಿಲ್ಲಾ ವಯಸ್ಕತ ಶಿಕ್ಷಣಾಧಿಕಾರಿ) ಮತ್ತು (2) ಶ್ರೀ. **ಹೆಚ್.ಬಿ ಚಿದಾನಂದ,** ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗಾಮ ಗ್ರಾಮ ಪಂಚಾಯತ್, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1. ಕಂಪ್ಲೆಂಟ್/ಉಪಲೋಕ್/ಬಿಡಿ/1620/2016/ಸನಿಕಾಸ–1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 31/08/2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 77 ವಿಸೇಬಿ 2018, ಬೆಂಗಳೂರು, ದಿನಾಂಕ: 02/04/2018.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ/230/ 2018, ಬೆಂಗಳೂರು ದಿನಾಂಕ: 15/05/2018.
4. Order No.UPLOK-1 & 2/DE/transfers/ 2018, Bengaluru, Dated 06/08/2018 file transferred from ARE-7 to ARE-14.

* * * * * *

ಈ ದೂರನ್ನು, ದೂರುದಾರರಾದ ಶ್ರೀ. **ಕೆ.ಆರ್ ರಾಜಕುಮಾರ್,** ತಳವಾರಕೇರಿ, ಶಿಕಾರಿಪುರ ತಾಲ್ಲೂಕು ಮತ್ತು ಅಂಚೆ, ಶಿವಮೊಗ್ಗ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ (1)

**ಶ್ರೀ. ಜಿ ಲೋಹಿತ್,** ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿಕಾರಿಪುರ (ಪ್ರಸ್ತುತ ಯಾದಗಿರಿ ಜಿಲ್ಲಾ ವಯಸ್ಕತ ಶಿಕ್ಷಣಾಧಿಕಾರಿ) ಮತ್ತು (2) **ಶ್ರೀ. ಹೆಚ್.ಬಿ ಚಿದಾನಂದ,** ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗಾಮ ಗ್ರಾಮ ಪಂಚಾಯತ್, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರುಗಳ ವಿರುದ್ಧ ಸಲ್ಲಿಸಿದ್ದು ಇರುತ್ತದೆ. ದೂರುದಾರರು ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಗಾಮ ಗ್ರಾಮ ಪಂಚಾಯತ್ ವ್ಯಾಪ್ತಿಯ ಜಲ, ಕಟ್ಟೆ, ಕೆರೆಯ ಕಾಮಗಾರಿಯು 2014-15 ಮತ್ತು 2015-16ನೇ ಸಾಲಿನಲ್ಲಿ ಒಟ್ಟು ಎರಡು ಕಾಮಗಾರಿಗಳು ಎಂಜಿಎನ್ಆರ್ಇಜಿಎ ಯೋಜನೆ ಅಡಿ ಅನುಮೋದನೆಗೊಂಡಿದ್ದು, 2014-15ನೇ ಸಾಲಿನಲ್ಲಿ ರೂ.1.50 ಲಕ್ಷಕ್ಕೆ ಮತ್ತು 2015-16ನೇ ಸಾಲಿನಲ್ಲಿ ರೂ.1.00 ಲಕ್ಷಕ್ಕೆ ಅನುಮೋದನೆಗೊಂದಿದ್ದು, ಸದರಿ ಕಾಮಗಾರಿಯಲ್ಲಿ ಹಣ ದುರುಪಯೋಗವಾಗಿದೆ ಎಂದು ಆಪಾದಿಸಿದ್ದರು. ಆದ್ದರಿಂದ, ಆ.ಸ.ನೌರವರುಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2) ರಲ್ಲಿ ಕಾಣಿಸಿದಂತೆ, ದಿನಾಂಕ: 02/04/2018ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 15/05/2018 ರಂದು ಅಪರ ನಿಬಂಧಕರು, ವಿಚಾರಣೆಗಳು-7 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ-1 ಶ್ರೀ. ಜಿ ಲೋಹಿತ್,** ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿಕಾರಿಪುರ (ಪ್ರಸ್ತುತ ಯಾದಗಿರಿ ಜಿಲ್ಲಾ ವಯಸ್ಕತ

ಶಿಕ್ಷಣಾಧಿಕಾರಿ) ಮತ್ತು **ಆ.ಸ.ನೌ–2 ಶ್ರೀ. ಹೆಚ್.ಬಿ ಚಿದಾನಂದ,** ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗಾಮ ಗ್ರಾಮ ಪಂಚಾಯತ್, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರುಗಳ **ವಿರುದ್ಧ ದೋಷಾರೋಪಣೆ *(Articles of Charge)*** ಅನ್ನು **ಅಪರ ನಿಬಂಧಕರು, ವಿಚಾರಣೆಗಳು–7 ರವರು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 18/07/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ಅನುಬಂಧ–1**

**ದೋಷಾರೋಪಣೆ**

2) ಅ) 1ನೇ ಆ.ಸ.ನೌ.ರ ಶ್ರೀ.ಜಿ.ಲೋಹಿತ್ ಆದ ನೀವು ಕಾರ್ಯನಿರ್ವಾಹಕ ಅಧಿಕಾರಿಯಾಗಿ ತಾಲ್ಲೂಕು ಪಂಚಾಯತ್, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಹಾಗೂ 2ನೇ ಆ.ಸ.ನೌ.ರ ಶ್ರೀ.ಹೆಚ್.ಬಿ.ಚಿದಾನಂದ ಆದ ನೀವು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಗಾಮ ಗ್ರಾಮ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಪೊದೆ ಮತ್ತು ಕಳೆ ನಿರ್ವಹಣೆಯಲ್ಲಿ ಚದರ ಮೀಟರ್‌ಗೆ ಬದಲು ಘನ ಮೀಟರ್‌ನಂತೆ ಲೆಕ್ಕ ಮಾಡಿ ಹೆಚ್ಚುವರಿಯಾಗಿ ರೂ.23,533/–ನ್ನು ವಸೂಲು ಮಾಡಿ ಹಾಗೂ ಕೆರೆಯಲ್ಲಿ ನಿರ್ವಹಿಸಿದ ಕಾಲುವೆಯ ದರವನ್ನು ಬಿಲ್‌ನಲ್ಲಿ ನಮೂದಿಸುವಾಗ ಹೆಚ್ಚುವರಿಯಾಗಿ ರೂ.8,875/–ನ್ನು ವಸೂಲು ಮಾಡಿ ಕರ್ತವ್ಯಲೋಪ ಹಾಗೂ ದುರ್ವರ್ತನೆ ಎಸಗಿರುತ್ತೀರಿ.

ಆ) ಅದೇ ರೀತಿ, 1 ಮತ್ತು 2ನೇ ಆ.ಸ.ನೌ.ರರಾದ ನೀವು ಹೆಚ್ಚುವರಿ ಮೊತ್ತ ರೂ.32,408/–ನ್ನು ಪಾವತಿಸುವಾಗ ಸರಿಯಾಗಿ ಪರಿಶೀಲಿಸದೇ ಹಣ

ನೀಡಿದ್ದು, ಸದರಿ ಹೆಚ್ಚುವರಿ ಮೊತ್ತವನ್ನು ಕಂತಿನ ಮೂಲಕ ವಸೂಲು ಮಾಡಿ ಕರ್ತವ್ಯಲೋಪ ಹಾಗೂ ದುರ್ವರ್ತನೆ ಎಸಗಿರುತ್ತೀರಿ.

ಇ) ಅದೇ ರೀತಿ, 1 ಮತ್ತು 2ನೇ ಆ.ಸ.ನೌ.ರರಾದ ನೀವು ಸದರಿ ಕಾಮಗಾರಿಗಳ ನಿರ್ವಹಣೆ ಮಾಡಿರುವ ಬಗ್ಗೆ ಹಾಗೂ ಹಣ ಖರ್ಚು ಮಾಡಿರುವ ಬಗ್ಗೆ ಪೂರಕ ದಾಖಲೆಗಳನ್ನು ಸಲ್ಲಿಸದೇ, ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ಕಾಮಗಾರಿಯನ್ನು ಮಾನವ ಸಂಪನ್ಮೂಲದ ಮೂಲಕ ನಿರ್ವಹಣೆ ಮಾಡಿರುವ ಬಗ್ಗೆ ಸದರಿ ಕಾರ್ಮಿಕರು ಜಾಬ್ ಕಾರ್ಡ್ ಹೊಂದಿರುವ ಬಗ್ಗೆ ಅವರ ಖಾತೆಗೆ ಕೂಲಿ ಹಣ ಜಮಾ ಆಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸದೇ ಕರ್ತವ್ಯಲೋಪ ಹಾಗೂ ದುರ್ವರ್ತನೆ ಎಸಗಿರುತ್ತೀರಿ.

ಈ) ಅದೇ ರೀತಿ, 1 ಮತ್ತು 2ನೇ ಆ.ಸ.ನೌ.ರರಾದ ನೀವು ಸದರಿ ಕಾಮಗಾರಿಗಳನ್ನು ನಿರ್ವಹಣೆ ಮಾಡುವ ಸಂದರ್ಭದಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯಲ್ಲಿ ಹೇಳಲಾದ ಮಾರ್ಗಸೂಚಿಗಳನ್ನು ಸರಿಯಾಗಿ ಪಾಲಿಸದೇ ಕರ್ತವ್ಯಲೋಪ ಹಾಗೂ ದುರ್ವರ್ತನೆ ಎಸಗಿರುತ್ತೀರಿ.

3) ನೀವು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

# ಅನುಬಂಧ-2

## ದೋಷಾರೋಪಣೆಯ ವಿವರ

**(ಕಲಂ 12(3) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಅಡಿಯಲ್ಲಿ ಸಲ್ಲಿಸಿದ ವರದಿಯ ಯಥಾವತ್ತು ವಿವರಣೆಯಾಗಿರುತ್ತದೆ)**

4) ಶ್ರೀ.ಕೆ.ಆರ್.ರಾಜಕುಮಾರ್, ತಳವಾರಕೇರಿ, ಶಿಕಾರಿಪುರ ತಾಲ್ಲೂಕು ಮತ್ತು ಅಂಚೆ, ಶಿವಮೊಗ್ಗ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು 1) ಶ್ರೀ.ಜಿ.ಲೋಹಿತ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿಕಾರಿಪುರ (ಪ್ರಸ್ತುತ ಯಾದಗಿರಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ), ಶಿವಮೊಗ್ಗ ಜಿಲ್ಲೆ ಹಾಗೂ 2) ಶ್ರೀ.ಹೆಚ್.ಬಿ.ಚಿದಾನಂದ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗಾಮ ಗ್ರಾಮ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ರವರುಗಳ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

5) **ಪ್ರಕರಣದ ಸಂಕ್ಷಿಪ್ತ ಸಾರಾಂಶ:-** ದೂರುದಾರರು ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಗಾಮ ಗ್ರಾಮ ಪಂಚಾಯತ್ ವ್ಯಾಪ್ತಿಯ ಜಲ, ಕಟ್ಟೆ, ಕೆರೆಯ ಕಾಮಗಾರಿಯು 2014-15 ಮತ್ತು 2015-16ನೇ ಸಾಲಿನಲ್ಲಿ ಒಟ್ಟು ಎರಡು ಕಾಮಗಾರಿಗಳು ಎಂಜಿಎನ್ಆರ್ಇಜಿಎ ಯೋಜನೆ ಅಡಿ ಅನುಮೋದನೆಗೊಂಡಿದ್ದು, 2014-15ನೇ ಸಾಲಿನಲ್ಲಿ ರೂ.1.50 ಲಕ್ಷಕ್ಕೆ ಮತ್ತು 2015-16ನೇ ಸಾಲಿನಲ್ಲಿ ರೂ.1.00 ಲಕ್ಷಕ್ಕೆ ಅನುಮೋದನೆಗೊಂದಿದ್ದು, ಸದರಿ ಕಾಮಗಾರಿಯಲ್ಲಿ ಹಣ ದುರುಪಯೋಗವಾಗಿದೆ ಎಂದು ಆಪಾದಿಸಿದ್ದರು.

6) ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಕರ್ನಾಟಕ ಲೋಕಾಯುಕ್ತ ತಾಂತ್ರಿಕ ವಿಭಾಗದ ಮುಖ್ಯ ಅಭಿಯಂತರರಿಗೆ ಸೂಚಿಸಿದ್ದು, ಸದರಿಯವರು ತನಿಖೆ ಕೈಗೊಂಡು ವರದಿ ಸಲ್ಲಿಸಲು ಶ್ರೀ.ಚಂದ್ರಪ್ಪ ಎಂ, ಸಹಾಯಕ ಅಭಿಯಂತರರು-3, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು

(ಇನ್ನು ಮುಂದೆ 'ತನಿಖಾಧಿಕಾರಿಗಳು' ಎಂದು ಕರೆಯಲಾಗುವುದು) ರವರಿಗೆ ಆದೇಶಿಸಿದ್ದು, ಅದರಂತೆ ತನಿಖಾಧಿಕಾರಿಯವರು ತಮ್ಮ ವರದಿಯನ್ನು ಸಲ್ಲಿಸಿದ್ದಾರೆ.

7) ತನಿಖಾಧಿಕಾರಿಗಳ ವರದಿಗೆ 1 ಮತ್ತು 2ನೇ ಆ.ಸ.ನೌ.ರರು ಉತ್ತರವನ್ನು ಸಲ್ಲಿಸಿ ತನಿಖಾ ವರದಿಗೆ ತಮ್ಮ ಆಕ್ಷೇಪಣೆಗಳು ಇಲ್ಲವೆಂದು ಹೇಳಿದ್ದಾರೆ.

8) ದೂರು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ 1 ಮತ್ತು 2ನೇ ಆ.ಸ.ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠತೆಯನ್ನು ತೋರಿಸದೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾದ್ದರಿಂದ 1 ಮತ್ತು 2ನೇ ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕ್ರಮ ಜರುಗಿಸಬಹುದಾಗಿದೆ ಎಂದು ಕಂಡುಬಂದಿರುತ್ತದೆ.

9) ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ 1 ಮತ್ತು 2ನೇ ಆ.ಸ.ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ 1 ಮತ್ತು 2ನೇ ಆ.ಸ.ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು 1 ಮತ್ತು 2ನೇ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ–

2ರವರಿಗೆ ವಹಿಸಿ ಆದೇಶ ಮಾಡಿದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರುಗಳು ದಿನಾಂಕ: 11/10/2018 ರಂದು ಹಾಜರಾಗಿದ್ದು, ಆ.ಸ.ನೌ.ರವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರುಗಳು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರುಗಳಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

7. ಆ.ಸ.ನೌ-1 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ಮಹಾತ್ಮ ಗಾಂಧೀ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಕಾಯ್ದೆ ಕಲಂ ನಂ.16ರ ಪ್ರಕಾರ ಗ್ರಾಮ ಪಂಚಾಯಿತಿಯಲ್ಲಿ ನಿರ್ವಹಿಸಬೇಕಾದ ಕಾಮಗಾರಿ ವಿವರ, ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡಬೇಕಾದ ಜವಬ್ದಾರಿ ಗ್ರಾಮ ಪಂಚಾಯತಿಯದ್ದು ಆಗಿರುತ್ತದೆ. ಆ ಪ್ರಕಾರ ಗ್ರಾಮ ಪಂಚಾಯಿತಿಯೂ 2014-15 ಮತ್ತು 2015-16ನೇ ಸಾಲಿನಲ್ಲಿ ಕ್ರಿಯಾ ಯೋಜನೆ ಸಿದ್ದ ಪಡಿಸಿ ಅನುಮೋದನೆಗಾಗಿ ತಾಲ್ಲೂಕು ಪಂಚಾಯಿತಿ ಮೂಲಕ ಜಿಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಿದ್ದು, ದೂರಿನಲ್ಲಿ ನಮೂದಿಸಲಾದ ಕಾಮಗಾರಿಗಳು ಈ ಕ್ರಿಯಾ ಯೋಜನೆಯಡಿಯಲ್ಲಿ ಸೇರ್ಪಡಯಾಗಿದ್ದು ಅನುಮೋದನೆಯಾಗಿರುತ್ತದೆ. ಗ್ರಾಮ ಪಂಚಾಯಿತಿಯ ಬೇಡಿಕೆಯಂತೆ 2014-15ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಗಾಮ ಗ್ರಾಮದ ಜಲಕಟ್ಟೆ

ಕೆರೆಯಲ್ಲಿ ಜಂಗಲ್ ಕಟಾವು ಮಾಡಿ, ಹೂಳೆತ್ತುವ ಕಾಮಗಾರಿ ಕ್ರಿಯಾ ಯೋಜನೆಗೆ ಹಾಗೂ ಕಾಮಗಾರಿ ಪ್ರಾರಂಭಿಸಲು ತಾಂತ್ರಿಕ ಮಂಜೂರಾತಿ ಸಂಖ್ಯೆ 255/2014-15 ಮತ್ತು ಕಾಮಗಾರಿ ಪ್ರಾರಂಭಿಕ ಪತ್ರ ಸಂಖ್ಯೆ 09/2014-15 ದಿನಾಂಕ: 31/01/2015 ರ ಪ್ರಕಾರ ಕಾರ್ಯಾದೇಶ ನೀಡಲಾಗಿದೆ.

8. ಮುಂದುವರೆದು ಎಂ.ಜಿ.ಎನ್.ಆರ್.ಇ.ಜಿ ಕಾಯ್ದೆ ಪ್ಯಾರ ನಂ.16(8) ರ ಪ್ರಕಾರ ಕಾಮಗಾರಿಯ ಅನುಷ್ಠಾನ, ತಾಂತ್ರಿಕ ನಿರ್ವಹಣೆ ಹಾಗೂ ಅಳತೆ ನಿರ್ವಹಣೆಯ ಹೊಣೆ ಸಂಪೂರ್ಣ ಗ್ರಾಮ ಪಂಚಾಯಿತಿಯ ಜವಬ್ದಾರಿಯಾಗಿರುತ್ತದೆ. ಗ್ರಾಮ ಪಂಚಾಯಿತಿಯ ತಾಂತ್ರಿಕ ಸಹಾಯಕರು ಕಾಮಗಾರಿಯೂ ಅನುಷ್ಠಾನಗೊಳಿಸಿದ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿರತ್ತಾರೆ, ಆ ಅಳತೆಗಳನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರು ಜಂಟಿಯಾಗಿ ಪರಿಶೀಲಿಸಿ, ಕೂಲಿ ಕಾರ್ಮಿಕರಿಗೆ ಕೂಲಿ ಹಣವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡುವುದು ಗ್ರಾಮ ಪಂಚಾಯಿತಿಯ ಜವಬ್ದಾರಿಯಾಗಿರುತ್ತದೆ. 2015-16ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಗಾಮ ಗ್ರಾಮದ ಜಲಕಟ್ಟೆ ಕೆರೆ ಹೂಳೆತ್ತುವ ಕಾಮಗಾರಿಗೆ ತಾಂತ್ರಕ ಮಂಜೂರಾತಿ ಸಂಖ್ಯೆ 548/2015-16 ಕಾಮಗಾರಿ ಪ್ರಾರಂಭಿಕ ಪತ್ರ ಸಂಖ್ಯೆ 4/2015-16 ದಿನಾಂಕ 24/02/2016ರ ಪ್ರಕಾರ ಕಾಮಗಾರಿ ಪ್ರಾರಂಭಿಸಲು ಕಾರ್ಯಾದೇಶವನ್ನು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಕಛೇರಿಯಿಂದ ನೀಡಲಾಗಿದ್ದು, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಎನ್. ಎಂ .ಆರ್ ಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳು ಪರಿಶೀಲಿಸಿ ಹಣ ಬಿಡುಗಡೆಗೊಳ್ಳುತ್ತದೆ. ಎನ್. ಎಂ. ಆರ್.ಗಳನ್ನು ಬಿಟ್ಟು ಈ ಯೋಜನೆಯಲ್ಲಿ ಸಾಮಾಗ್ರಿಗಳ ಪೂರೈಕೆಗಾಗಿ ಬಿಲ್ಲಿನಲ್ಲಿ ಬಂದಿದ್ದರೆ ಅಂತಹ ಬಿಲ್ಲುಗಳನ್ನು ಕಾರ್ಯನಿರ್ವಹಣಾ ಅಧಿಕಾರಿ ತಾಲ್ಲೂಕು ಪಂಚಾಕಯಿತಿ ಇವರು ಪರಿಶೀಲಿಸಬೇಕಾಗುತ್ತದೆ. ಆದರೆ ಸದರಿ ಕಾಮಗಾರಿಗಳಲ್ಲಿ ಕೇವಲ ಜಂಗಲ್ ಕ್ಲಿಯರೆನ್ಸ್ ಹಾಗೂ ಹೂಳೆತ್ತುವ ಕಾಮಗಾರಿ ಐಟಂಗಳು ಮಾತ್ರ ಇದ್ದು ಅವುಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಆದ್ದರಿಂದ ಈ ಕಾಮಗಾರಿಯ ಎನ್.ಎಂ.ಆರ್ ಗಳನ್ನು ತಾನು ಪರಿಶೀಲಿಸುವುದಿಲ್ಲ ಏಕೆಂದರೆ ಶಿಕಾರಿಪುರ ತಾಲ್ಲೂಕಿನಲ್ಲಿ 47

ಪಂಚಾಯಿತಿಗಳಿದ್ದು ಕೆಲಸದ ಒತ್ತಡದಲ್ಲಿ ಈ ಎಲ್ಲಾ ಪಂಚಾಯಿತಿಗಳು ಎನ್.ಎಂ.ಆರ್ ಗಳನ್ನು ಪರಿಶೀಲಿಸುವುದು ಅತ್ಯಂತ ಕಷ್ಟ ಸಾಧ್ಯವಾಗಿರುತ್ತದೆ.

9. ಮುಂದುವರೆದು ಸದರಿ ಕಾಮಗಾರಿಗಳು ಶೇ.100% ಕೂಲಿ ಕಾರ್ಮಿಕರ ಮೂಲಕ ಅನುಷ್ಟಾನಗೊಳಿಸಲಾಗಿದೆ. ಕೂಲಿ ಕಾರ್ಮಿಕರಿಗೆ ಆನ್ ಲೈನ್ ಮುಖಾಂತರ ಹಣ ಪಾವತಿಸಲಾಗಿದೆ ಕೆಲಸ ಮಾಡಿದ ಮಾನವ ದಿನಗಳಿಗೆ ಹಾಜರಾತಿ ಪಟ್ಟಿಯನ್ನು ಪರಿಶೀಲಿಸಿ ಹಣ ಪಾವತಿ ಮಾಡಿರುತ್ತಾರೆ. ಯಾವುದೇ ಹಣ ದುರುಪಯೋಗ ಆಗಿರುವುದಿಲ್ಲ. ಕಾಮಗಾರಿಯ ಅಳತೆಯಲ್ಲಿ Bush clearance in medium and dense shrub ಎಂಬ ಐಟಂ ಗೆ 2ನೇ ಮತ್ತು ಪಾರ್ಟ್ ಬಿಲ್ಲಿನ ಅಳತೆಯನ್ನು ದಾಖಲಿಸುವಾಗ ಕಾಮಗಾರಿ ಉಸ್ತುವಾರಿಯನ್ನು ನೋಡುತ್ತಿದ್ದ ತಾಂತ್ರಿಕ ಸಹಾಯಕರು ಚದರು ಮೀಟರ್ ಗೆ ಬದಲು ಘನ ಮೀಟರ್‌ನಲ್ಲಿ ಕಣ್ಣತಪ್ಪಿನಿಂದ ಲೆಕ್ಕ ಮಾಡಿದ್ದು ಇರುತ್ತದೆ. ಇದರಿಂದ ಹೆಚ್ಚುವರಿಯಾಗಿ ರೂ.23,533/– ಮೊತ್ತವನ್ನು ಪಾವತಿಸಲಾಗಿರುತ್ತದೆ ಹಾಗೂ ಕೆರೆಯ ಅಂಗಳದಲ್ಲಿ ಗಟ್ಟಿಯಾದ ಗ್ರಾವಲ್ ಕಂಡುಬಂದಿರುವುದರಿಂದ ಅಲ್ಲಿ ನಿರ್ವಹಿಸಿದ ಕಾಮಗಾರಿ ಐಟಂಗೆ ಅಂದಾಜು ಪಟ್ಟಿಯಲ್ಲಿರುವಂತೆ ಕಾಲುವೆಯ ದರವನ್ನು ಅಳವಡಿಸಿಕೊಂಡಿದ್ದು, ಅದರಿಂದಾಗಿ ಹೆಚ್ಚುವರಿಯಾಗಿ ರೂ8875/–ಗಳನ್ನು ಪಾವತಿಸಲಾಗಿರುತ್ತದೆ ಎಂದು ಶ್ರೀ. ಹೆಚ್.ಎಸ್. ಪ್ರಕಾಶ್, ಜಿಲ್ಲಾ ಗುಣ ನಿಯಂತ್ರಣ ಮಾನಿಟರ್ ಇವರು ನೀಡಿರುವ ವರದಿಯಲ್ಲಿ ತಿಳಿಸಿದ್ದು ಇರುತ್ತದೆ. ಈ ಮೊತ್ತವನ್ನು ಸಂಬಂಧಪಟ್ಟ ತಾಂತ್ರಿಕ ಸಹಾಯಕರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರಿಂದ ಈ ಒಟ್ಟು ಹಣವನ್ನು (ರೂ.23,533 + ರೂ.8,875 = ರೂ.32,408/–) ವಸೂಲು ಮಾಡಬೇಕೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಅದರ ಅನುಸಾರ ವಸೂಲಾತಿಗೆ ಸೂಚಿಸಿರುವ ಮೊತ್ತವನ್ನು ಸಂಬಂಧಪಟ್ಟ ತಾಂತ್ರಿಕ ಸಹಾಯಕರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಕೂಡಲೇ ಸಮನಾಗಿ ವಸೂಲಿ ಮಾಡಿ Karnataka State Employment Guarantee Fund ಹೆಸರಿನಲ್ಲಿ ಡಿ.ಡಿ. ಪಡೆದು ಜಿಲ್ಲಾ ಪಂಚಾಯತ್ ಕಛೇರಿಗೆ ಸಲ್ಲಿಸುವಂತೆ ಶಿಕಾರಿಪುರ ತಾಲ್ಲೂಕು ಪಂಚಾಯಿತಿ ಕಛೇರಿ ಪತ್ರದ ಸಂಖ್ಯೆ:

ತಾಪಂಶಿ:ಎಂ.ಜಿ.ಎನ್.ಆರ್.ಇ.ಜಿ./01/2016–17 ದಿನಾಂಕ: 02/12/2016 ರಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿರುತ್ತೇನೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗಾಮ ಗ್ರಾಮ ಪಂಚಾಯತ್ ಇವರು ಕೆನರಾ ಬ್ಯಾಂಕ್ ಈಸೂರು ಶಿಕಾರಿ ಪುರ ತಾಲ್ಲೂಕು ಶಾಖೆ ಡಿ.ಡಿ ಸಂಖ್ಯೆ: 750457 ದಿನಾಂಕ: 04/04/2017 ರಲ್ಲಿ ರೂ.16,238/– ಹಾಗೂ ತಾಂತ್ರಿಕ ಸಂಯೋಜಕರು ಆಕ್ಸಿಸ್ ಬ್ಯಾಂಕ ಶಿಕಾರಿಪುರ ಡಿ.ಡಿ ಸಂಖ್ಯೆ: 000297 ದಿನಾಂಕ: 10/03/2017 ರಲ್ಲಿ ರೂ.16,240/– ಗಳ ಬ್ಯಾಂಕ್ ಹುಂಡಿಯನ್ನು ಪಡೆದು ಸಲ್ಲಿಸಿರುತ್ತಾರೆ. ದೂರು ಸಲ್ಲಿಸಿದ ನಂತರ ದೂರಿನ ಬಗ್ಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗ ಶ್ರೀ ಚಂದ್ರಪ್ಪ ಎಂ. ಸಹಾಯಕ ಅಭಿಯಂತರರು–03, ಇವರು ದಿನಾಂಕ 18/04/2017ರಲ್ಲಿ ಶಿಕಾರಿಪುರ ತಾಲ್ಲೂಕು ಗಾಮ ಗ್ರಾಮದ ಜಲಕಟ್ಟೆ ಕೆರೆಗೆ ಬೇಟಿ ನೀಡಿ ದೂರುದಾರರು ಮತ್ತು ಇತರ ಅಧಿಕಾರಗಳ ಸಮ ಕ್ಷಮದಲ್ಲಿ ಸ್ಥಳ ಪರಿಶೀಲನೆ ಮತ್ತು ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಕಾಮಗಾರಿಗೆ ನಮೂದಿಸಿರುವ ಎನ್.ಎಂ.ಆರ್ ಗಳಿಗೆ ಬಿಡುಗಡೆಗೊಳಿಸಿರುವ ಮೊತ್ತಕ್ಕೆ ಅಳತೆ ಪುಸ್ತಕದಲ್ಲಿ ನಮೂದಿಸಿರುವ ಮೊತ್ತವು ಸಮನಾಗಿರುತ್ತದೆ ಹಾಗೂ ಕೂಲಿಗಾರರ ಸಹಿಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿರುವುದಿಲ್ಲ ಸದರಿ ಕಾಮಗಾರಿಗಳಿಗೆ ಯಂತ್ರಗಳನ್ನು ಉಪಯೋಗಿಸಿರುವುದಿಲ್ಲವೆಂದು ಹಾಗೂ ವಸೂಲಾತಿ ಮೊತ್ತ ರೂ.32,408/– ಗಳನ್ನು ತಾಂತ್ರಿಕ ಸಹಾಯಕರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಸಮನಾಗಿ ಒಂದೇ ಸಲ ವಸೂಲಿ ಮಾಡಿ ಡಿ.ಡಿ. ಮೂಲಕ ಸಂಬಂಧಪಟ್ಟವರ ಹೆಸರಿಗೆ ಪಾವತಿಸಿರುವುದು ದಾಖಲೆಗಳಿಂದ ಕಂಡು ಬಂದಿರುತ್ತದೆ ಎಂದು ತಮ್ಮ ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ. ಇದರಲ್ಲಿ ಶಿಕಾರಿಪುರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರ ಇವರ ಪಾತ್ರ ಮತ್ತು ಕರ್ತವ್ಯ ಲೋಪದ ಪಾತ್ರ ಇರುವುದಿಲ್ಲವೆಂದು ನಮೂದಿಸಿರುತ್ತಾರೆ. ಈ ಮೇಲಿನ ಕಾರಣಗಳಿಂದಾಗಿ ಸದರಿ ಹೆಚ್ಚುವರಿ ಮೊತ್ತವನ್ನು ರೂ.32,408/– ಗಳನ್ನು ತಾನು ಪಾವತಿಸಿರುವುದಿಲ್ಲ ಎಂದು ಹೇಳಿರುತ್ತಾರೆ.

10. ಆ.ಸ.ನೌ–2 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ಆ.ಸ.ನೌ–1 ರವರು ಹೇಳಿದ ವಿಷಯವನ್ನೇ ಅವರು ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿರುತ್ತಾರೆ. ಇವರ ಪ್ರಕಾರ ಹೆಚ್ಚುವರಿಯಾಗಿ

ಪಾವತಿಯಾಗಿರುವ ಹಣ ಕಾಮಗಾರಿಯ ಉಸ್ತುವಾರಿ ವಹಿಸಿದ್ದ ಸಂಬಂಧಪಟ್ಟ ತಾಂತ್ರಿಕ ಸಹಾಯಕರ ಕಣ್ಣತಪ್ಪಿನಿಂದ ಆಗಿದ್ದು ಆ ಹೆಚ್ಚುವರಿ ಮೊತ್ತವನ್ನು ತಾಂತ್ರಿಕ ಸಹಾಯಕರು ಮತ್ತು ತಾನು ಒಂದೇ ಕಂತಿನಲ್ಲಿ ಸಂಬಂಧಪಟ್ಟ ಲೆಕ್ಕಕ್ಕೆ ಜಮಾ ಮಾಡಲು ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ, ಜಿಲ್ಲಾಪಂಚಾಯತ್ ಶಿವಮೊಗ್ಗ ಇವರಿಗೆ ನೀಡಲಾಗಿರುತ್ತದೆ. ಆದ್ದರಿಂದ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿಯಲ್ಲಿ ಹೇಳಲಾದ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಿರುತ್ತೇನೆ ಎಂದು ಹೇಳಿರುತ್ತಾರೆ. ಮೇಲಾಗಿ ತಮ್ಮ ಮೇಲೆ ಮಾಡಲಾದ ಆರೋಪಗಳ ಕುರಿತು ತಾನು ಸಲ್ಲಿಸಿರುವ ಹೇಳಿಕೆಯನ್ನು ನೈಸರ್ಗಿಕ ನ್ಯಾಯಾಲಯದಲ್ಲಿ ಮತ್ತು ವಾಸ್ತವ ಸಂಗತಿಗಳ ಆಧಾರದ ಮೇಲೆ ಪರಮಾರ್ಶಿಸಿದಾಗ ಒಟ್ಟು ಮೊತ್ತ ರೂ.32,408/- ಹೆಚ್ಚುವರಿ ಪಾವತಿಸಿರುವುದು ತನ್ನ ಕಾರ್ಯ ನಿರ್ವಹಣೆಯ ನ್ಯೂನತೆಯಿಂದ ಆಗಿರುವುದಿಲ್ಲ ಬದಲಿಗೆ ತಾಂತ್ರಿಕ ಸಹಾಯಕರ ಕಣ್ಣತಪ್ಪಿನಿಂದ ಆಗಿರುತ್ತದೆ ಎಂದು ಹೇಳಿರುತ್ತಾರೆ.

11. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ ಹಾಗೂ ಚಂದ್ರಪ್ಪ ಎಂ, ಸಹಾಯಕ ಕಾರ್ಯಪಾಲಕ ಅಭಿಯಂತರರು, ತಾಂತ್ರಿಕ ವಿಭಾಗ ಕರ್ನಾಟಕ ಲೋಕಾಯುಕ್ತ ಇವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿದ್ದು ಇವರ ಪರವಾಗಿ ನಿ.ಪಿ.5 ರಿಂದ ನಿ.ಪಿ.17 ರವರೆಗೆ ದಾಖಲಾತಿಗಳನ್ನು ನಿಶಾನೆಗೆ ಒಳಪಡಿಸಿಕೊಂಡಿರುತ್ತಾರೆ. ಆಸನೌ-1 ರವರು ತಮ್ಮನ್ನು ಡಿ.ಡಬ್ಲ್ಯೂ.2 ಎಂದು ವಿಚಾರಣೆಗೆ ಒಳಪಡಿಸಿಕೊಂಡು ಹಾಗೂ ಆಸನೌ-2 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ ಹಾಗೂ ನಿ.ಡಿ.1 ಮತ್ತು ನಿ.ಡಿ.2 ಅನ್ನು ಪಿ.ಡಬ್ಲ್ಯೂ.2 ಇವರ ಪಾಟೀ ಸವಾಲಿನಲ್ಲಿ ಗುರುತಿಸಿಕೊಂಡಿರುತ್ತಾರೆ.

12. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಆಲಿಸಲಾಯಿತು.

13. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

14. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

15. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಆ.ಸ.ನೌ–1 ರವರ ವಿರುದ್ಧ ನಕರಾತ್ಮಕವಾಗಿ.**
**ಆ.ಸ.ನೌ–2 ರವರ ವಿರುದ್ಧ ಸಕರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

16. ಈ ಪ್ರಕರಣದಲ್ಲಿ ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ **ಶ್ರೀ. ಕೆ.ಆರ್ ರಾಜಕುಮಾರ್,** ತಳವಾರಕೇರಿ, ಶಿಕಾರಿಪುರ ತಾಲ್ಲೂಕು ಮತ್ತು ಅಂಚೆ, ಶಿವಮೊಗ್ಗ ಜಿಲ್ಲೆ ರವರ ಸಾಕ್ಷ್ಯ ನುಡಿಸಿಕೊಂಡಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, 2014–15 ಮತ್ತು 2015–16ನೇ ಸಾಲಿನಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆರೆಯ ಅಭಿವೃದ್ಧಿಗಾಗಿ, 2014–15ನೇ ಸಾಲಿನಲ್ಲಿ 1,50,000/– ರೂಪಾಯಿಗಳು, 2015–16ನೇ ಸಾಲಿನಲ್ಲಿ 1,00,000 ಅನುದಾನ ಬಿಡುಗಡೆಯಾಗಿತ್ತು. 2014–15ನೇ ಸಾಲಿನ 1,50,000/– ಅನುದಾನದಲ್ಲಿ ಕೆರೆಯ ಹೂಳೆತ್ತುವ ಕಾಮಗಾರಿಗೆ ಸಂಬಂಧಪಟ್ಟಂತೆ ಕೆರೆಯ 10ಮೀ ಅಗಲದಷ್ಟು ಕಾಲುವೆ ನಿರ್ಮಿಸಲಾಗಿದೆ ಎಂದು ಅಳತೆ ಪುಸ್ತಕದಲ್ಲಿ ನಮೂದಿಸಿರುತ್ತಾರೆ. ಅಳತೆ

ಪುಸ್ತಕದಲ್ಲಿ ಕ್ಯೂಬಿಕ್ ಮೀಟರ್‌ನಲ್ಲಿ ನಮೂದಿಸಬೇಕಾಗಿದ್ದು ಆದರೆ ಸ್ಕ್ವೇರ್ ಮೀಟರ್‌ನಲ್ಲಿ ನಮೂದಿಸಿ ತಪ್ಪು ಮಾಡಿರುತ್ತಾರೆ, ಇದರಿಂದ ಸರ್ಕಾರಕರೆ ಸುಮಾರು 10–12 ಸಾವಿರವರೆಗೆ ನಷ್ಟವುಂಟಾಗಿರುತ್ತದೆ. ಮುಂದುವರೆದು ಕೆರೆಯಲ್ಲಿ ಕಾಲುವೆ ತೆಗೆಯುವ ಪ್ರಮೇಯ ಬರುವುದಿಲ್ಲ, ಆದರೂ ಸಹ ಹಾಗೆ ನಮೂದಿಸಿದ್ದಾರೆ ಆದ್ದರಿಂದ ತಾನು ದೂರನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾನೆ. ನಿ.ಪಿ.1 ದೂರು, ನಿ.ಪಿ.2 ಮತ್ತು ನಿ.ಪಿ.3 ಇವು ಫಾರಂ ನಂ.1 ಮತ್ತು 2 ಆಗಿರುತ್ತವೆ. ನಿ.ಪಿ.4ರಲ್ಲಿ ಒಟ್ಟು 36 ದಾಖಲೆಗಳಿದ್ದು ಇದ್ದು ಅವು ನಿಶಾನೆಗೆ ಒಳಪಡಿಸಲಾಗಿದೆ. ನಿ.ಪಿ.4ರಲ್ಲಿ ದೂರುದಾರರು ಕೆಲವೊಂದು ಛಾಯಚಿತ್ರಗಳನ್ನು ಸಲ್ಲಿಸಿದ್ದು, ಅವುಗಳ ಪ್ರಕಾರ ಮೊದಲು ಜೆ.ಸಿ.ಬಿ ಯಂತ್ರದಿಂದ ಹೂಳನ್ನು ತೆಗೆಸಿ ನಂತರ ಕೂಲಿ ಕೆಲಸಗಾರರನ್ನು ಕಾಮಾಗಾರಿಯ ಸ್ಥಳಕ್ಕೆ ಕರೆಯಿಸಿ ಛಾಯಚಿತ್ರಗಳನ್ನು ತೆಗೆದಿರುತ್ತಾರೆ ವಿನಃ ಈ ಛಾಯಚಿತ್ರಗಳಲ್ಲಿ ಎಲ್ಲಿಯೂ ಕೂಲಿ ಕೆಲಸಗಾರರು ಹೂಳನ್ನು ತೆಗೆಯುತ್ತಿರುವ ಬಗ್ಗೆ ಕಂಡು ಬಂದಿರುವುದಿಲ್ಲ ಎಂದು ನಮೂದಿಸಿರುತ್ತಾರೆ. ಕೆಲವೊಂದು ಛಾಯ ಚಿತ್ರಗಳು ಜಲಕಟ್ಟೆ ಕೆರೆಯ ಬಗ್ಗೆ ಇದ್ದು, ದೂರುದಾರರ ಪ್ರಕಾರ ಈ ಜಲಕಟ್ಟೆ ಕೆರೆಯಲ್ಲಿ ಎಲ್ಲಿಯೂ ದೊಡ್ಡ ಅಥವಾ ಚಿಕ್ಕ ಕಾಲುವೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ಈ ಕೆರೆಗೆ ಗದ್ದೆಯಿಂದ ಮುಖ್ಯ ರಸ್ತೆಗೆ ಚಿಕ್ಕ ಚರಂಡಿಯಿಂದ ನೀರು ಹರಿದು ಬರುತ್ತದೆ ಎಂದು ಹೇಳಿದ್ದು ಇರುತ್ತದೆ. ಆದರೆ ಈ ಕಾಮಗಾರಿಗೆ ಇಂಜಿನಿಯರ್‌ರವರು ಅಳತೆ ಪುಸ್ತಕದಲ್ಲಿ 10 ಮೀಟರ್ ಅಗಲ ಕಾಲುವೆ ಇದೆ ಎಂದು ಬರೆದಿರುತ್ತಾರೆ. ಆದರೆ ಎಲ್ಲಿಯೂ ಕಾಲುವೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ನಿ.ಪಿ.4ರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಪ್ರಾರಂಭ ಪತ್ರ ಸಂಖ್ಯೆ, ಗಾಮ ಗ್ರಾಮದ ಜಲಕಟ್ಟೆ ಕೆರೆ ಜಂಗಲ್ ಕಠಾವು ಮಾಡಿ ಹೂಳೆತ್ತುವುದು ಕಾಮಗಾರಿಯ ಅಂದಾಜು ಪಟ್ಟಿ, ಎನ್.ಎಂ.ಆರ್ ಶೀಟ್, ಮಸ್ಟರ್ ರೋಲ್ ದಾಖಲಾತಿಗಳಿದ್ದು, ಮಸ್ಟರ್ ರೋಲ್ ನಲ್ಲಿ ಕೂಲಿಗಾರರ ಹೆಸರು, ಅವರು ಎಷ್ಟು ದಿನ ಕೆಲಸ ಮಾಡಿರುತ್ತಾರೆ, ಅವರಿಗೆ ಕೊಟ್ಟ ಕೂಲಿಯ ಹಣ ಮತ್ತು ಬ್ಯಾಂಕ್ ಖಾತೆಯ ನಂಬರ್ ಮತ್ತು ಯಾವ ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಲಾಗಿರುತ್ತದೆ ಎಂಬ ಬಗ್ಗೆ ನಮೂದಾಗಿರುತ್ತದೆ.

17. ದೂರುದಾರರು ತಮ್ಮ ಪಾಟೀ ಸವಾಲಿನಲ್ಲಿ "ತಾನು ಬಿ.ಇ. ಸಿವಿಲ್ ವರೆಗೆ ಓದಿದ್ದು, ಖಾಸಗಿ ಗುತ್ತಿಗೆ ಕೆಲಸ ಮಾಡುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಮುಂದುವರೆದು ನರೇಗಾ ಯೋಜನೆಯಡಿಯಲ್ಲಿನ ಕಾಮಗಾರಿಗೆ ಸಂಬಂಧಪಟ್ಟ ಅಂದಾಜು ಪಟ್ಟಿಯನ್ನು ತಯಾರು ಮಾಡಿ ಅನುಮೋದನೆಗಾಗಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ನಿಯೋಜನೆಗೆ ಒಳಪಟ್ಟಂತಹ ತಾಂತ್ರಿಕ ಅಧಿಕಾರಿಗಳಿಂದ ಪಡೆದುಕೊಳ್ಳುತ್ತಾರೆ ಹಾಗೂ ನರೇಗಾ ಯೋಜನೆಯ ಕಾಮಗಾರಿಗಳನ್ನು ನೋಡಿಕೊಳ್ಳಲು ನರೇಗ ತಾಂತ್ರಿಕ ಸಹಾಯಕರು" ಇರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ. ಅಲ್ಲದೇ, "ಕಾಮಗಾರಿಗೆ ಸಂಬಂಧಪಟ್ಟ ಸಂಪೂರ್ಣ ಅಳತೆ ಮತ್ತು ವಿವರಣೆಯನ್ನು ಎಂ.ಬಿ ಪುಸ್ತಕದಲ್ಲಿ ಮತ್ತು ಬಿಲ್ಲಿನಲ್ಲಿ ನಮೂದಿಸಿರುವ ಕೆಲಸ ತಾಂತ್ರಿಕ ಸಹಾಯಕರದ್ದು ಆಗಿರುತ್ತದೆ" ಎಂದು ಒಪ್ಪಿಕೊಂಡಿರುತ್ತಾರೆ. ಅಲ್ಲದೇ, ಎಂ.ಬಿ ಪುಸ್ತಕದಲ್ಲಿ ಅಳತೆಯನ್ನು ದೃಢೀಕರಣ ಮಾಡುವವರು ಶ್ರೀ. ಆರ್. ವಿನಯ್‌ಕುಮಾರ್, ತಾಂತ್ರಿಕ ಸಹಾಯಕ-1, ಎಂ.ಜಿ.ಎನ್.ಆರ್.ಇ.ಜಿ.ಎ. ತಾಲ್ಲೂಕು ಪಂಚಾಯಿತಿ ಶಿಕಾರಿಪುರದವರು ಇರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ. ಅಲ್ಲದೇ ಈ ಕಾಮಗಾರಿಗಳನ್ನು ಕೂಲಿಕೆಲಸಗಾರರಿಂದ ಮಾಡಿದ್ದು, ಈ ಕೆಲಸಕ್ಕೆ ಯಾವುದೇ ಯಂತ್ರ ಬಳಸಿರಲಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ದೂರುದಾರರ ಪ್ರಕಾರ ಕಾಮಗಾರಿ ಕೆಲಸವನ್ನು ಜೆ.ಸಿ.ಬಿ ಯಂತ್ರಗಳನ್ನು ಬಳಸಿ ಮಾಡಲಾಗಿರುತ್ತದೆ ನಂತರ ಕೂಲಿಗಾರರನ್ನು ಕರೆಯಿಸಿ ಕೆಲಸ ಮಾಡಿರುವಂತೆ ತೋರಿಸುವ ಛಾಯ ಚಿತ್ರಗಳನ್ನು ತೆಗೆದಿರುತ್ತಾರೆ ಅಂತ ದೂರಿನಲ್ಲಿ ಹೇಳಿದ್ದು ಆದರೆ ತಮ್ಮ ಪಾಟೀ ಸವಾಲಿನಲ್ಲಿ ಈ ಕಾಮಗಾರಿಗಳಿಗೆ ಯಂತ್ರಗಳನ್ನು ಬಳಸಿರುವುದಿಲ್ಲ, ಎಲ್ಲಾ ಕಾಮಗಾರಿ ಕೆಲಸವನ್ನು ಕೂಲಿಕಾರರೇ ಮಾಡಿರುತ್ತಾರೆ ಅಂತ ಒಪ್ಪಿಕೊಂಡಿರುತ್ತಾರೆ.

18. ಮುಂದುವರೆದು ತಮ್ಮ ಪಾಟೀ ಸವಾಲಿನಲ್ಲಿ "ಕೆರೆಯ ಹೂಳೆತ್ತುವ ಕಾಮಗಾರಿಯನ್ನು ಮಾಡಿದ್ದಾರೆ ಆದರೆ ಅಳತೆ ಪುಸ್ತಕದಲ್ಲಿ ಕಾಲುವೆ ಹೂಳೆತ್ತುವ ಕಾಮಗಾರಿಯೆಂದು ನಮೂದಿಸಿದ್ದಾರೆ. ಈ ಹೂಳೆತ್ತುವ ದರ ಕೆರೆ ಮತ್ತು ಕಾಲುವೆಗೆ ಒಂದೇ ಆಗಿತ್ತು ಎನ್ನುವುದು ಸರಿ. ಹೂಳೆತ್ತುವ ಕಾಮಗಾರಿಗೆ ಸಂಬಂಧಪಟ್ಟಂತೆ "ಸ್ಥಳ" (ಕಾಲುವೆ ಬದಲು ಕೆರೆ) ಮಾತ್ರ ಬದಲಾವಣೆಯಾಗಿರುತ್ತದೆ ಎನ್ನುವುದು ಸರಿ" ಎಂದು ಒಪ್ಪಿಕೊಂಡಿರುತ್ತಾರೆ. ಮುಂದುವರೆದು

"ಆ.ಸ.ನೌ –2 ಇವರು ಈ ಕಾಮಗಾರಿಗೆ ಸಂಬಂಧಪಟ್ಟ ಕೂಲಿಗಾರರ ವೇತನವನ್ನು ಅವರುಗಳ ಬ್ಯಾಂಕ್ ಖಾತೆಗೆ ಜಮಾ ಮಾಡಿರುವುದನ್ನು ಹೊರತುಪಡಿಸಿ ಇನ್ಯಾವುದೇ ಹೆಚ್ಚಿನ ಹಣವನ್ನು ಡ್ರಾ ಮಾಡಿರುವುದಿಲ್ಲ ಎಂದರೆ ಸರಿ" ಎಂದು ಒಪ್ಪಿಕೊಂಡಿರುತ್ತಾರೆ. ಈ ಮೇಲಿನ Admission ಗಳನ್ನು ಪರಿಶೀಲಿಸಿದಾಗ ಕೂಲಿಕಾರರಿಂದ ಕೆಲಸವನ್ನು ನಿರ್ವಹಿಸಿ ಹಾಗೂ ಅವರ ಖಾತೆಗೆ ಹಣವನ್ನು ಜಮಾ ಮಾಡಿರುತ್ತಾರೆ ಎಂಬುದನ್ನು ಒಪ್ಪಿಕೊಂಡಿದ್ದರಿಂದ ಈ ವಿಷಯದ ಬಗ್ಗೆ ದೂರುದಾರರು ಹೇಳಿದ ಹಾಗೆ ಯಂತ್ರಗಳ ಸಹಾಯದಿಂದ ಕೆಲಸ ಮಾಡಿ ಹಣವನ್ನು ಕೂಲಿ ಕೆಲಸಗಾರರಿಗೆ ಮುಟ್ಟಿರುವುದಿಲ್ಲ ಎಂದು ತಮ್ಮ ದೂರಿನಲ್ಲಿ ಹೇಳಿದ್ದು ಅದು ಇವರ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಾಕ್ಷಿಗೆ ವ್ಯತಿರಿಕ್ತವಾಗಿರುತ್ತದೆ.

19. ಈ ವಿಚಾರಣೆಯಲ್ಲಿ ಶ್ರೀ. ಚಂದ್ರಪ್ಪ ಎಂ, ಈ ಸಂಸ್ಥೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ತಾಂತ್ರಿಕ ವಿಭಾಗ, ರವರನ್ನು ತನಿಖಾಧಿಕಾರಿಗಳಾಗಿ ನೇಮಿಸಿದ್ದು ಇರುತ್ತದೆ. ಇವರನ್ನು ಪಿ.ಡ್ಲ್ಯೂ–2 ಎಂದು ನುಡಿ ಸಾಕ್ಷಿ ಮಾಡಿಸಲಾಗಿದೆ. ಇವರು ತಮ್ಮ ವರದಿಯನ್ನು ಸಲ್ಲಿಸಿದ್ದು ಅದನ್ನು ನಿ.ಪಿ.5 ಎಂದು ಗುರುತಿಸಲಾಗಿದೆ. ತನಿಖಾ ವರದಿಯ ಪ್ರಕಾರ, ತನಿಖಾಧಿಕಾರಿಗಳು 18/04/2017 ರಂದು ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳ ಸಮಕ್ಷಮ, ಗ್ರಾಮ ಪಂಚಾಯಿತಿಯ ಸದಸ್ಯರು ಹಾಗೂ ದೂರುದಾರರ ಸಮಕ್ಷಮ ವಿಚಾರಣೆಯನ್ನು ಕೈಗೊಂಡಿರುತ್ತಾರೆ. ಕಾಮಗಾರಿಯಲ್ಲಿ ಯಂತ್ರಗಳನ್ನು ಉಪಯೋಗಿಸಲಾಗಿರುತ್ತದೆ ಎಂಬ ಬಗ್ಗೆ ದೂರುದಾರರನ್ನು ಹಾಗೂ ಅಧಿಕಾರಿಗಳನ್ನು ವಿಚಾರಣೆ ಮಾಡಿದಾಗ, ಆ.ಸ.ನೌ–2 ಇವರು ಯೋಜನೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವಾಗ ಎಲ್ಲಿಯೂ ಯಂತ್ರಗಳನ್ನು ಬಳಸಿರುವುದಿಲ್ಲ ಆದರೆ ಕಾಮಗಾರಿಯೂ ಮುಗಿದ ನಂತರ ರೈತರು ತಮ್ಮ ಹೊಲಗಳಿಗೆ ಜೆ.ಸಿ.ಬಿ ಮತ್ತು ಟ್ರಾಕ್ಟರ್‌ಗಳನ್ನು ಉಪಯೋಗಿಸಿ ಮಣ್ಣನ್ನು ಸಾಗಿಸಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ ದೂರುದಾರರು ಸಲ್ಲಿಸಿರುವ ಛಾಯ ಚಿತ್ರಗಳ ಬಗ್ಗೆ ವಿಚಾರಿಸಿದಾಗ ದೂರುದಾರರು ಕೆರೆಯಲ್ಲಿ ಯಂತ್ರಗಳು ಕಾರ್ಯ ನಿರ್ವಹಿಸುತ್ತಿರುವುದನ್ನು ನೋಡಿ ಛಾಯಚಿತ್ರಗಳನ್ನು ತೆಗೆದು ಸಲ್ಲಿಸಿರುವುದಾಗಿ ತಿಳಿಸಿದ್ದು, ಆದರೆ ಯಂತ್ರಗಳು ಉದ್ಯೋಗ ಖಾತ್ರಿ ಯೋಜನೆ ಕಾಮಗಾರಿ ಮುಗಿದ ನಂತರ ನಿರ್ವಹಿಸಿರುತ್ತಾರೆ ಎಂದು ತನಗೆ ತಿಳಿದಿಲ್ಲವೆಂದು ದೂರುದಾರರು

ß

ತಿಳಿಸಿರುತ್ತಾರೆ. ಸದರಿ ದೂರಿಗೆ ಸಂಬಂಧಿಸಿದಂತೆ ಹಾಜರಿದ್ದ ಗ್ರಾಮ ಪಂಚಾಯತ್ ಸದಸ್ಯರನ್ನು ವಿಚಾರಿಸಲಾಗಿ ಕಾಮಗಾರಿಗಳು ತಮ್ಮ ಸಮ್ಮುಖದಲ್ಲಿ ನಿರ್ವಹಣೆ ಆಗಿರುವುದರಿಂದ ಎಲ್ಲಿಯೂ ಯಂತ್ರಗಳನ್ನು ಬಳಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಮುಂದುವರೆದು ಗ್ರಾಮ ಪಂಚಾಯಿತಿ ಸದಸ್ಯರ ಹೇಳಿಕೆಗಳಿಂದ, ಕಾರ್ಯನಿರ್ವಾಹಕರ ವರದಿಯಿಂದ ಹಾಗೂ ದೂರುದಾರರ ಹೇಳಿಕೆಗಳಿಂದ ಸದರಿ ಕಾಮಗಾರಿಗಳಲ್ಲಿ ಯಂತ್ರಗಳನ್ನು ಉಪಯೋಗಿಸಿರುತ್ತಾರೆ ಎಂಬ ಆರೋಪವೂ ಸಾಬೀತಾಗಿಲ್ಲವೆಂದು ತನಿಖಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ. ಅದಲ್ಲದೆ ದೂರುದಾರರು ತಮ್ಮ ಪಾಟೀ ಸವಾಲಿನಲ್ಲಿ ಕೂಲಿ ಕೆಲಸಗಾರರಿಂದ ಕಾಮಗಾರಿಗಳನ್ನು ಮಾಡಿಸಿದ್ದು ಯಂತ್ರಗಳನ್ನು ಉಪಯೋಗಿಸಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಯಂತ್ರಗಳನ್ನು ಉಪಯೋಗಿಸಿ ಕಾಮಗಾರಿ ಮಾಡಲಾಗಿದೆ ಎಂದು ರುಜುವಾತುಪಡಿಸಿರುವುದಿಲ್ಲ. ತನಿಖಾಧಿಕಾರಿಗಳು ದೂರಿನಲ್ಲಿ ಪ್ರಸ್ತಾಪಿಸಿರುವಂತೆ ಎನ್.ಎಂ.ಆರ್‌ಗಳನ್ನು ಪರಿಶೀಲಿಸಿದಾಗ ಯಾವುದೇ ರೀತಿಯ ವ್ಯತ್ಯಾಸ ಮೇಲ್ನೋಟಕ್ಕೆ ಕಂಡು ಬಂದಿರುವುದಿಲ್ಲ ಎಂದು ಹೇಳಿರುತ್ತಾರೆ. ಮುಂದುವರೆದು ತಮ್ಮ ವರದಿಯಲ್ಲಿ ಆನಂತರ ಅಧಿಕಾರಿಗಳು ಮತ್ತು ದೂರುದಾರರು ಹಾಗೂ ಪಂಚಾಯಿತಿ ಸದಸ್ಯರ ಜೊತೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಿರುವ ಕೆರೆಯನ್ನು ಪರೀಕ್ಷಿಸಿದಾಗ ಒಂದು ವರ್ಷ ಆದ ಕಾರಣ ಕಳೆದ ವರ್ಷದಲ್ಲಿ ಕೆರೆ ತುಂಬಿರುವುದರಿಂದ ಕಾಮಗಾರಿಗಳ ಬಗ್ಗೆ ಸ್ಪಷ್ಟ ಚಿತ್ರಣ ಕಂಡು ಬಂದಿರುವುದಿಲ್ಲ, ಅಳತೆಗೆ ಬಿಟ್ಟಿರುವ ಸಾಕ್ಷಿ ಗುಡ್ಡೆಗಳು ಎಲ್ಲಿಯೂ ಕಂಡು ಬಂದಿರುವುದಿಲ್ಲ ಆದರೂ ಕಾಮಗಾರಿಗಳನ್ನು ನಿರ್ವಹಿಸಿ ಕೆರೆಯಲ್ಲಿ ಹೂಳು ತೆಗೆದಿರುವುದು ಕಂಡು ಬಂದಿರುತ್ತದೆ ಎಂದು ಹೇಳಿರುತ್ತಾರೆ.

20. ಇವರ ಅಭಿಪ್ರಾಯದಂತೆ ದೂರುದಾರರು ತಮ್ಮ ದೂರಿನಲ್ಲಿ ಆಪಾದಿಸಿರುವಂತೆ Bush clearance medium and dense shrub ಎಂಬ ಐಟಂಗೆ ಚದುರ ಮೀಟರ್‌ಗೆ ಬದಲು ಘನ ಮೀಟರ್‌ನಲ್ಲಿ ಲೆಕ್ಕ ಮಾಡಿರುವುದು ಕಂಡು ಬಂದಿರುತ್ತದೆ. ಇದರಿಂದ ಹೆಚ್ಚುವರಿಯಾದ ರೂ.23,533/- ಗಳನ್ನು ವಸೂಲಿ ಮಾಡಿರುವುದು ದಾಖಲೆಗಳಿಂದ ತಿಳಿದುಬಂದಿರುತ್ತದೆ ಎಂದು ಹೇಳಿರುತ್ತಾರೆ. ಅದೇ ರೀತಿ ದೂರುದಾರರು ತಮ್ಮ ದೂರಿನಲ್ಲಿ 10

ಮೀಟರ್ ಅಗಲದ ಕಾಲುವೆಯ ಜಲಕಟ್ಟೆ ಕೆರೆಯಲ್ಲಿ ಎಲ್ಲಿಯೂ ಕಂಡು ಬಂದಿರುವುದಿಲ್ಲ ಆದರೆ ಅಳತೆ ಪುಸ್ತಕದಲ್ಲಿ 10 ಮೀಟರ್ ಅಗಲ ಇದೆ ಎಂದು ಬಿಲ್ಲನ್ನು ಬರೆದಿರುತ್ತಾರೆ ಎಂಬ ಆರೋಪಕ್ಕೆ ಸದರಿ ಕಾಮಗಾರಿಯನ್ನು ನಿರ್ವಹಿಸುವ ಸ್ಥಳ ಬದಲಾವಣೆ ಆಗಿದ್ದು, ಕಾಮಗಾರಿಯೂ ನಡೆದಿರುತ್ತದೆ ಎಂದು ದಾಖಲೆಗಳು ಹಾಗೂ ಸ್ಥಳ ತನಿಖೆಯಿಂದ ತಿಳಿದು ಬರುತ್ತದೆ. ಆದರೆ ಕೆರೆಯಲ್ಲಿ ನಿರ್ವಹಿಸಿ ಕಾಲುವೆಯ ದರವನ್ನು ಬಿಲ್ಲಿನಲ್ಲಿ ನಮೂದಿಸಿದಾಗ ಹೆಚ್ಚುವರಿಯಾದ ರೂ.8,875/- ವಸೂಲಿ ಮಾಡಿರುವುದು ದಾಖಲೆಯಿಂದ ತಿಳಿದು ಬಂದಿರುತ್ತದೆ ಎಂದು ಹೇಳಿರುತ್ತಾರೆ. ತಮ್ಮ ವರದಿಯಲ್ಲಿ ಮೇಲೆ ತಿಳಿಸಿರುವ ರೂ.23,533/- ಮತ್ತು ರೂ.8,875/- ಒಟ್ಟು ರೂ.32,408/- ಗಳಲ್ಲಿ ತಾಂತ್ರಿಕ ಸಹಾಯಕರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರ ಕರ್ತವ್ಯ ಲೋಪವೂ ಕಂಡು ಬಂದಿದ್ದು, ಸದರಿಯವರಿಂದ ಸಮ ಕಂತಿನಲ್ಲಿ ವಸೂಲಿ ಮಾಡಿ Karnataka State Employment Guarantee Fund ಇವರ ಹೆಸರಿಗೆ ಡಿ.ಡಿ ತೆಗೆದು ಸಲ್ಲಿಸಿರುವುದು ದಾಖಲೆಗಳಿಂದ ಕಂಡು ಬಂದಿರುತ್ತದೆ ಎಂದು ಹೇಳಿರುತ್ತಾರೆ. ನಿ.ಪಿ.6 ಇದು ಮಹಜರ್ ಇರುತ್ತದೆ. ನಿ.ಪಿ.7ರಲ್ಲಿ ಛಾಯಚಿತ್ರಗಳು ಇದ್ದು ಸದರಿ ಛಾಯ ಚಿತ್ರಗಳಲ್ಲಿ, ಈ ಯೋಜನೆಯಲ್ಲಿ ಕಾಮಗಾರಿಗಳು ನಿರ್ವಹಿಸುವ ಮುನ್ನ ಬೆಳೆದಿರುವ ಜಂಗಲ್ ಛಾಯ ಚಿತ್ರಗಳು ಇದ್ದು, ಜಂಗಲ್ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಛಾಯ ಚಿತ್ರಗಳು, ಕೆರೆಯಲ್ಲಿ ಮಣ್ಣನ್ನು ತೆಗೆಯುತ್ತಿರುವ ಛಾಯ ಚಿತ್ರಗಳು ಹಾಗೂ ಕೆರೆಯಲ್ಲಿ ಗ್ರಾವಲ್ ಮಣ್ಣನ್ನು ತೆಗೆಯುತ್ತಿರುವ ಕಾಮಗಾರಿಯ ಚಿತ್ರಗಳು ಇರುತ್ತವೆ. ನಿ.ಪಿ.11 ರಿಂದ ನಿ.ಪಿ.17 ಗಳು ಈಗಾಗಲೇ ನಿ.ಪಿ.4ರಲ್ಲಿ ಒಳಗೊಂಡಿರುತ್ತದೆ.

21. ತನಿಖಾಧಿಕಾರಿಗಳು ತಮ್ಮ ಮುಖ್ಯವಿಚಾರಣೆಯ ವರದಿಯಲ್ಲಿ ಹೇಳಿದ ಹಾಗೆ ಸಾಕ್ಷಿಯನ್ನು ನುಡಿದಿದ್ದು, ತಮ್ಮ ವರದಿಯ ಖಂಡಿಕೆ 5.01 ರಲ್ಲಿ ತಿಳಿಸಿರುವಂತೆ ರೂ.23,533/- ಹಾಗೂ ಖಂಡಿಕೆ 5.02 ರಲ್ಲಿ ರೂ.8,875/- ಒಟ್ಟು ರೂ.32,408/- ಗಳನ್ನು ತಾಂತ್ರಿಕ ಸಹಾಯಕರು ಹಾಗೂ ಆ.ಸ.ನೌ-2 ರವರ ಕರ್ತವ್ಯ ಲೋಪ ಕಂಡು ಬಂದಿದ್ದು ಸದರಿಯವರ ಸಮಕಂತುಗಳಲ್ಲಿ ವಸೂಲು ಮಾಡಿ Karnataka State Employment

Guarantee Fund ಇವರ ಹೆಸರಿಗೆ ಡಿ.ಡಿ ತೆಗೆದು ಸಲ್ಲಿಸಿರುವುದು ದಾಖಲೆಗಳಿಂದ ಕಂಡು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಈ ವಿಷಯದ ಬಗ್ಗೆ ಆ.ಸ.ನೌ-2 ಇವರು ಒಪ್ಪಿಕೊಂಡಿದ್ದು ನಿ.ಡಿ.9ರ ಪ್ರಕಾರ ಹಣವನ್ನು ತುಂಬಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ತಮ್ಮ ಪಾಟೀ ಸವಾಲಿನಲ್ಲಿ "ನಿ.ಪಿ.11 ಮತ್ತು ನಿ.ಪಿ.15 ಎಂ.ಬಿ ಪುಸ್ತಕದಲ್ಲಿ ಅಳತೆಯನ್ನು ದಾಖಲಿಸಿ ಪರಿಶೀಲನೆ ಮಾಡಿರುವವರು ಶಿಕಾರಿಪುರ ತಾಲ್ಲೂಕು ಪಂಚಾಯಿತಿ ತಾಂತ್ರಿಕ ಸಹಾಯಕರಾಗಿದ್ದ ಆರ್. ವಿನಯ್ ಕುಮಾರ್ ಎನ್ನುವುದು ಸರಿ. ಈ ದೂರಿನಲ್ಲಿನ ಎರಡು ಕಾಮಗಾರಿಗಳು ಸಹ ಕೂಲಿ ಕಾರ್ಮಿಕರನ್ನೇ ಮಾಡಿಸುವಂತ ಕಾಮಗಾರಿಯಾಗಿದ್ದು ಎನ್ನುವುದು ಸರಿ. ಸಾಮಾಗ್ರಿಗಳನ್ನು ಬಳಸಿ ಮಾಡಿರುವಂತಹ ಕಾಮಗಾರಿ ಆಗಿರುವುದಿಲ್ಲ ಎನ್ನುವುದು ಸರಿ. ಈ ಕಾಮಗಾರಿಗಳಿಗೆ, ನೊಂದಾಯಿತ ಜಾಬ್ ಕಾರ್ಡ್ ಹೊಂದಿದಂತಹ ವ್ಯಕ್ತಿಗಳನ್ನು ನೇಮಿಸಿಕೊಂಡು ಕಾಮಗಾರಿಯನ್ನು ಮಾಡಿಸಿ, ಎನ್.ಎಂ.ಆರ್ ಗಳಲ್ಲಿ ಹಾಜರಾತಿಯನ್ನು ಪಡೆದು ನಂತರ ಕೂಲಿ ಹಣವನ್ನು ಅವರ ಬ್ಯಾಂಕ್ ಖಾತೆಗಳಿಗೆ ಆನ್ ಲೈನ್ ಎಫ್. ಟಿ.ಓ ಮೂಲಕ ಜಮಾ ಮಾಡಿರುತ್ತಾರೆ ಎನ್ನುವುದು ಸರಿ ಎನ್. ಎಂ.ಆರ್ ದಾಖಲೆ ಮಾಡಿರುವುದು ಮತ್ತು ಕೂಲಿ ಹಣವನ್ನು ಜಮಾ ಮಾಡಿರುವ ಬಗ್ಗೆ ಯಾವುದೇ ಲೋಪವಿರುವುದಿಲ್ಲ" ಎಂದು ನುಡಿದಿರುತ್ತಾರೆ.

22.ಅದೇ ರೀತಿ ತಮ್ಮ ಪಾಟೀ ಸವಾಲಿನಲ್ಲಿ Bush clearance medium and dense shrub ಎಂಬ ಐಟಂಗೆ ಚದುರ ಮೀಟರ್‌ಗೆ ಬದಲು ಘನ ಮೀಟರ್‌ನಲ್ಲಿ ಲೆಕ್ಕ ಮಾಡಿರುವುದು ತಾಂತ್ರಿಕ ಸಹಾಯಕರಾದ ಆರ್. ವಿನಯ್ ಕುಮಾರ್ ಎನ್ನುವವರು ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಮುಂದುವರೆದು ಸದರಿ ವಿನಯ್ ಕುಮಾರ್ ಹಾಗೂ ಆ.ಸ.ನೌ-2 ರವರು ಹೆಚ್ಚುವರಿಯಾಗಿ ವಸೂಲಿ ಮಾಡಿದಂತಹ ಹಣವನ್ನು ಡಿ.ಡಿ ಮೂಲಕ ಭರಿಸಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ. ಮುಂದುವರೆದು ಆ.ಸ.ನೌ-1 ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಣಾ ಅಧಿಕಾರಿಯಾಗಿದ್ದು ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಅವರ ಪಾತ್ರ ಇರಲಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

23. ಈ ವಿಚಾರಣೆಯಲ್ಲಿ ಆ.ಸ.ನೌ–2 ರವರು ಡಿ.ಡಬ್ಲ್ಯೂ–1 ಎಂದು ಸಾಕ್ಷಿ ನುಡಿದಿರುತ್ತಾರೆ. ಇವರ ಮುಖ್ಯ ವಿಚಾರಣೆಯಲ್ಲಿ ಈ ಕಾಮಗಾರಿಯ ಮೇಲುಸ್ತುವಾರಿಯನ್ನು ನೋಡಿಕೊಳ್ಳಲು ಜಿಲ್ಲಾ ಪಂಚಾಯಿತಿಯಿಂದ ತಾಂತ್ರಿಕ ಸಹಾಯಕರನ್ನು ನೇಮಿಸಲಾಗಿದ್ದು. ಇವರ ಕಣ್‌ತಪ್ಪಿನಿಂದ ಸ್ಕ್ವೇರ್ ಮೀಟರ್ ಬದಲಿಗೆ ಕ್ಯೂಬಿಕ್ ಮೀಟರ್ ಅಳತೆ ಪುಸ್ತಕದಲ್ಲಿ ನಮೂದಿಸಿದ್ದರಿಂದ ರೂ.23,500/– ಹೆಚ್ಚಿಗೆ ಪಾವತಿ ಮಾಡಲಾಗಿದ್ದು, ಅಲ್ಲದೆ ಕಾಲುವೆ ಹೂಳೆತ್ತುವ ಕಾಮಗಾರಿಗೆ ಸಂಬಂಧಪಟ್ಟಂತೆ ರೂ.8,875/– ಕಣ್ ತಪ್ಪಿನಿಂದ ಹೆಚ್ಚಿಗೆ ಪಾವತಿಯಾಗಿರುತ್ತದೆ ಎಂದು ನುಡಿದಿರುತ್ತಾರೆ. ಮುಂದುವರೆದು ಮೇಲ್ಕಂಡ ರೀತಿಯಲ್ಲಿ ಹೆಚ್ಚುವರಿ ಹಣ ಪಾವತಿಯಾಗಿದ್ದರಿಂದ, ಪ್ರಕಾಶ್ ಜಿಲ್ಲಾ ಗುಣ ನಿಯಂತ್ರಣಾಧಿಕಾರಿ, ಜಿಲ್ಲಾಪಂಚಾಯತ್ ಶಿವಮೊಗ್ಗ ರವರು ಸ್ಥಳಕ್ಕೆ ಬಂದು ಪರಿಶೀಲಿಸಿ ದಾಖಲಾತಿಗಳನ್ನು ಹೆಚ್ಚುವರಿಯಾಗಿ ಪಾವತಿ ಮಾಡಿದ್ದ ರೂ.32,408/–ನ್ನು ಇವರು ಹಾಗೂ ತಾಂತ್ರಿಕ ಸಹಾಯಕರು ಸಮ ಅರ್ಧಭಾಗದಷ್ಟು ಹಣವನ್ನು ಸರ್ಕಾರಕ್ಕೆ ವರದಿಯನ್ನು ನೀಡಿರುತ್ತಾರೆ. ಅದರಂತೆ ತಾನೂ ಹಣವನ್ನು ತುಂಬಿರುತ್ತೇನೆ ಎಂದು ಒಪ್ಪಿಕೊಂಡಿರುತ್ತೇನೆ. ಇವರನ್ನು ಮಂಡನಾಧಿಕಾರಿಗಳು ಪಾಟೀ ಸವಾಲು ಮಾಡಿದಾಗ ಗ್ರಾಮ ಪಂಚಾಯಿತಿಯಿಂದ ನಡೆಯುವ ಯಾವುದೇ ಕಾಮಗಾರಿಯ ಮೇಲುಸ್ತುವಾರಿ ತನ್ನದೇ ಇರುತ್ತದೆ, ಸ್ಥಳದಲ್ಲಿ ಕಾಮಗಾರಿ ಎಷ್ಟು ನಡೆದಿರುತ್ತದೆ ಆ ಲೆಕ್ಕವನ್ನು ಅಳತೆ ಪುಸ್ತಕದಲ್ಲಿ ಬರೆಯಬೇಕು, ಅದನ್ನು ತಾನು ಪರಿಶೀಲಿಸಬೇಕೆಂದು ಒಪ್ಪಿಕೊಂಡಿರುತ್ತಾನೆ. ಅಲ್ಲದೇ ಜಂಗಲ್ ಕ್ಲಿಯರೆನ್ಸ್ ಕಾಮಗಾರಿಯನ್ನು ಚದುರ ಮೀಟರ್‌ನಲ್ಲಿ ಲೆಕ್ಕ ಹಾಕುವ ಬದಲು ಘನ ಮೀಟರ್‌ನಲ್ಲಿ ಲೆಕ್ಕ ಹಾಕಿರುತ್ತಾರೆ ಎಂದು ಒಪ್ಪಕೊಂಡಿದ್ದು, ಅದಕ್ಕೆ ನೀವು ಅನುಮೋದನೆ ನೀಡಿರುತ್ತೀರಿ ಎಂದು ಮಾಡಿದ ಸಲಹ ನಾನು ಕೊಟ್ಟಿಲ್ಲ ಎಂದು ಹೇಳಿರತ್ತಾರೆ. ತಾಂತ್ರಿಕ ಸಹಾಯಕರು ಬರೆದಂತಹ ಲೆಕ್ಕವನ್ನು ನೀವು ಪರಿಶೀಲಿಸಬೇಕಿತ್ತು ಎಂದು ಮಾಡಿದ್ದ ಸಲಹೆಗೆ ಅದು ನನಗೆ ಗೊತ್ತಾಗುವುದಿಲ್ಲ ಎಂದು ಹೇಳಿರುತ್ತಾನೆ. ಆ.ಸ.ನೌ–2 ರವರು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ಹಾಗೂ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡ ಹಾಗೆ ಎಂ.ಬಿ ಪುಸ್ತಕದಲ್ಲಿ ಬರೆದ ವಿಷಯವನ್ನು ಇವರು ಪರಿಶೀಲನೆ ಮಾಡಬೇಕಾಗುತ್ತದೆ. ಇವರ ಪ್ರಕಾರ ಹೊರ ಗುತ್ತಿಗೆಯ ಆಧಾರದ ಮೇಲೆ ನೇಮಕಗೊಂಡ ವಿನಾಯಕ ಸಹಾಯಕರ ಕಣ್ ತಪ್ಪಿನಿಂದ ಅಳತೆಯನ್ನು ತಪ್ಪಾಗಿ ತೋರಿಸಿದ್ದರಿಂದ ಹೆಚ್ಚಾದ ಹಣವನ್ನು ಪಾವತಿ ಮಾಡಿರುತ್ತಾರೆ ಎಂದು

ಒಪ್ಪಿಕೊಂಡಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ ಇವರು ಹಣವನ್ನು ಪಾವತಿಯನ್ನು ಮಾಡುವಾಗ ಈ ವಿಷಯವನ್ನು ಪರಿಶೀಲನೆ ಮಾಡಬೇಕಾಗಿತ್ತು, ಅದೇ ರೀತಿ ಹಣವನ್ನು ಬಿಡುಗಡೆ ಮಾಡುವಾಗದರೂ ಸಹ ಗಮನ ಹರಿಸಬೇಕಾಗಿತ್ತು ಆದರೆ ಅಲ್ಲಿಯೂ ಸಹ ಗಮನ ಹರಿಸಿರುವುದಿಲ್ಲ ಕೇವಲ ಅರ್ಧದಷ್ಟು ಹಣವನ್ನು ತುಂಬಿದ್ದಾರೆ ಎಂಬ ಮಾತ್ರಕ್ಕೆ ಇವರ ತಪ್ಪಿ ಇರುವುದಿಲ್ಲವೆಂದೇನು ಅಲ್ಲ. ದೂರುದಾರರು ದಿನಾಂಕ: 07/07/2016 ರಲ್ಲಿ ದೂರನ್ನು ಸಲ್ಲಿಸಿದ್ದು, ತನಿಖಾಧಿಕಾರಿಗಳು (ಪಿ.ಡಬ್ಲ್ಯೂ–2) ಇವರು ದಿನಾಂಕ: 27/07/2016 ರಂದು ಕಾರ್ಯ ನಿರ್ವಾಹಕ ಅಧಿಕಾರಿ ಶಿಕಾರಿಪುರ ತಾಲ್ಲೂಕು ಪಂಚಾಯಿತಿ ಇವರಿಗೆ ದೂರಿನ ಪ್ರತಿಯನ್ನು ಕಳುಹಿಸಿ ಕಾಮಗಾರಿಗಳಿಗೆ ಮಾಹಿತಿ ಕೇಳಿದ ನಂತರ, ದಿನಾಂಕ: 04/04/2017 ರಲ್ಲಿ ಆ.ಸ.ನೌ–2 ರವರು ಡಿ.ಡಿ ಮುಖಾಂತರ ಹಣವನ್ನು ಕಟ್ಟಿರುತ್ತಾರೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಕರ್ತವ್ಯ ಲೋಪ ಮಾಡಿರುತ್ತಾರೆ ಎಂದು ಕಂಡು ಬಂದಿರುತ್ತದೆ.

24. ಆ.ಸ.ನೌ–1 ಇವರು ತಮ್ಮನ್ನು ಡಿ.ಡಬ್ಲ್ಯೂ–2 ಎಂದು ಸಾಕ್ಷಿ ನುಡಿದಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಡಿಸೆಂಬರ್ 2014 ರಿಂದ ಡಿಸೆಂಬರ್ 2016 ರವರೆಗೆ ಶಿಕಾರಿಪುರ ತಾಲ್ಲೂಕು ಪಂಚಾಯಿತಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನರೇಗಾ ಕಾಯ್ದೆ ಪ್ಯಾರ ನಂ.16(8) ಪ್ರಕಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಮಗಾರಿಗಳ ನಿರ್ವಹಣೆ ಹಾಗೂ ಅಳತೆ ದಾಖಲಿಸುವುದು ಆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟ ತಾಂತ್ರಿಕ ಸಹಾಯಕರ ಜವಬ್ದಾರಿಯಾಗಿರುತ್ತದೆ. ಇದಕ್ಕಾಗಿ ತಾಂತ್ರಿಕ ಸಹಾಯಕರು ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುತ್ತಾರೆ. 3–4 ಗ್ರಾಮ ಪಂಚಾಯಿತಿಗಳಿಗೆ ಒಬ್ಬ ತಾಂತ್ರಿಕ ಸಹಾಯಕರು ಇರುತ್ತಾರೆ. ಕಾಮಗಾರಿಯ ಅಳತೆಗಳನ್ನು ಪರಿಶೀಲಿಸುವ ಜವಬ್ದಾರಿ ತಾಂತ್ರಿಕ ಸಹಾಯಕರದ್ದು ಆಗಿತ್ತು ಈ ಕಾಮಗಾರಿ ಕೇವಲ ಅಕುಶಲ ಕಾರ್ಮಿಕರ ಅನುಷ್ಠಾನಗೊಳಿಸಬಹುದಾದ ಕಾಮಗಾರಿಯಾಗಿದ್ದು ಇದರಲ್ಲಿ ಸಾಮಾಗ್ರಿಗಳ ಭಾಗಾಂಶ ಇರುವುದಿಲ್ಲ. ಆಪ್ರಯುಕ್ತ ಇದನ್ನು ಪರಿಶೀಲಿಸುವುದು ತನ್ನ ವ್ಯಾಪ್ತಿಗೆ ಬರುವುದಿಲ್ಲ ಎಂದು ನುಡಿದಿರುತ್ತಾರೆ. ಅಲ್ಲದೆ ಸದರಿ ಕಾಮಗಾರಿಯ ಅನುಷ್ಠಾನದ

ಸಂದರ್ಭದಲ್ಲಿ ಗಟ್ಟಿಯಾದ ಮಣ್ಣು ಇರುವ ಪ್ರಯುಕ್ತ ಹೆಚ್ಚುವರಿ ದರದಲ್ಲಿ ಬಿಲ್ಲನ್ನು ತಯಾರು ಮಾಡಲಾಗಿದೆ. ಇದನ್ನು ತಾಂತ್ರಿಕ ಸಹಾಯಕರು ನಿರ್ವಹಿಸುತ್ತಾರೆ ಇದರಲ್ಲಿಯೂ ತನ್ನ ಪಾತ್ರ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಇವರ ಪಾಟೀ ಸವಾಲಿನಲ್ಲಿ ಮಂಡನಾಧಿಕಾರಿಯೂ ಜಂಗಲ್ ಕ್ಲಿಯರೆನ್ಸ್ ಘನ ಮೀಟರ್‌ನಲ್ಲಿ ಲೆಕ್ಕಾಚಾರ ಮಾಡಿರುತ್ತಾರೆ ಎನ್ನುವ ಸಲಹೆಗೆ ಅವರು ಒಪ್ಪಿಕೊಂಡಿರುತ್ತಾರೆ. ಅದರಂತೆ ಸರ್ಕಾರಕ್ಕೆ ರೂ.32,408/- ನಷ್ಟ ಉಂಟಾಗಿರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಆ.ಸ.ನೌ ಪರ ವಕೀಲರು ತಮ್ಮ ಲಿಖಿತ ವಾದವನ್ನು ಸಲ್ಲಿಸಿದ್ದು ಅದರಲ್ಲಿ ಆ.ಸ.ನೌ-1 ಇವರದು ಯಾವ ತಪ್ಪು ಇರುವುದಿಲ್ಲ ಎಂದು ಹೇಳಿದ್ದು ನಿ.ಡಿ.1 ಮತ್ತು ನಿ.ಡಿ.2 ರ ಪ್ರಕಾರ ಸರ್ಕಾರದ ಸುತ್ತೋಲೆಯ ಪ್ರಕಾರ ತಾಂತ್ರಿಕ ಸಹಾಯಕರನ್ನು ನೇಮಕ ಮಾಡಿದ್ದು ಅವರ ಕರ್ತವ್ಯವೂ ಕಾಮಗಾರಿಗಳ ಅಳತೆ ಪರಿಶೀಲಿಸುವುದು, ಹೊಸದಾಗಿ ಹೊರಗುತ್ತಿಗೆಯ ಮೇರೆಗೆ ನೇಮಕವಾದ ಇಂಜಿನಿಯರ್ಸ್ ರವರು ತಯಾರಿಸುವ ಯೋಜನೆಗಳ ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡುವುದು ನಮೂದಿಸಿದ್ದು ಇರುತ್ತದೆ. ಅಲ್ಲದೇ, ನಿ.ಡಿ.2ರ ಪ್ರಕಾರ ಕಾಮಗಾರಿಗಳಿಗೆ ಚೆಕ್ ಮೆಷರ್‌ಮೆಂಟ್‌ನ್ನು ಒಂದುಲಕ್ಷ ರೂಪಾಯಿ ವರೆಗೆ ಸಿವಿಲ್ ಕಾಮಗಾರಿಯನ್ನು ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರು ಮತ್ತು ತಾಂತ್ರಿಕ ಸಂಯೋಜಕರು, ಒಂದು ಲಕ್ಷ ಮೇಲ್ಪಟ್ಟು ಮತ್ತು ರೂಪಾಯಿ ಮೂರು ಲಕ್ಷದವರೆಗೆ ಇರುವ ಸಿವಿಲ್ ಕಾಮಾಗಾರಿಗಳಿಗೆ ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆಯ ಶಾಖಾಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರು ಹಾಗೂ ಮೂರು ಲಕ್ಷಗಳಿಗೆ ಮೇಲ್ಪಟ್ಟ ಸಿವಿಲ್ ಕಾಮಗಾರಿಗಳಿಗೆ ಪಂಚಾಯತ್ ರಾಜ್ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾಡಬೇಕಾಗುತ್ತದೆ ಎಂದು ನಮೂದು ಇರುತ್ತದೆ. ಎಂ.ಜಿ.ಎನ್.ಆರ್.ಇ.ಜಿ ಕಾಯ್ದೆ ಕಲಂ 16(1) ಮತ್ತು (8) ಈ ಕೆಳಗಿನಂತರ ಇರುತ್ತದೆ.

> **16. Responsibilities of the Gram Panchayats.**-(1) The Gram Panchayat shall be responsible for identification of the projects in the Gram Panchayat area to be taken up under a Scheme as per the

recommendations of the Grama Sabha and the Ward Sabhas and for executing and supervising such works.

(8) The works taken up by a Gram Panchayat under a Scheme shall meet the required technical standards and measurements.

ಈ ದಾಖಲಾತಿಗಳನ್ನು ಪರಿಶೀಲಿಸಿದಾಗ ಮತ್ತು ಪಿ.ಡಬ್ಲ್ಯೂ-1 ಮತ್ತು 2 ನ್ನು ಇವರ ಸಾಕ್ಷಿಗಳನ್ನು ಪರಿಶೀಲಿಸಿದಾಗ ಈ ಪ್ರಕರಣದಲ್ಲಿ ಆ.ಸ.ನೌ -1 ಇವರ ಪಾತ್ರ ಇರುವುದಿಲ್ಲ ಎಂದು ಕಂಡುಬರುತ್ತದೆ. ಈ ಮೇಲೆ ವಿವರಿಸಿದಂತೆ ಆ.ಸ.ನೌ-2 ಇವರು ಕರ್ತವ್ಯ ಲೋಪವೂ ಹೆಚ್ಚಿನ ಪಾವತಿ ಹಣವನ್ನು ಸಂದಾಯ ಮಾಡಿರುವ ಬಗ್ಗೆ ಕಂಡುಬರುತ್ತದೆ. ಆದರೆ, ಈ ಮೇಲೆ ವಿವರಿಸಿದಂತೆ ಆ.ಸ.ನೌ-2 ಇವರು ತಮ್ಮ ಸಾಕ್ಷಿಯಲ್ಲಿ ತಾಂತ್ರಿಕ ಸಹಾಯಕರ ಕಣ್ಣತಪ್ಪಿನಿಂದ ಚದುರ ಮೀಟರ್‌ಗೆ ಬದಲು ಘನ ಮೀಟರ್‌ರಲ್ಲಿ ಲೆಕ್ಕ ಮಾಡಿದ್ದು ಇರುತ್ತದೆ ಎಂದು ಹೇಳಿರುತ್ತಾರೆ. ಕಣ್ಣತಪ್ಪಿನಿಂದ ಆಗಿರುತ್ತದೆ ಎಂಬುದರ ಬಗ್ಗೆ ತಾಂತ್ರಿಕ ಸಹಾಯಕರಾದ ಶ್ರೀ. ಆರ್. ವಿನಯ್‌ಕುಮಾರ್ ಇವರ ಸಾಕ್ಷಿಯನ್ನು ಮಾಡಿಸಿರುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಕಣ್ಣತಪ್ಪಿನಿಂದ ಆಗಿರುತ್ತದೆ ಎಂಬುದರ ಬಗ್ಗೆ ಯಾವುದೇ ಪುರಾವೆ ಇರುವುದಿಲ್ಲ. ಆದ್ದರಿಂದ, ಆ.ಸ.ನೌ-2 ಇವರ ಕರ್ತವ್ಯ ಲೋಪವು ಹೆಚ್ಚಿನ ಪಾವತಿ ಹಣವನ್ನು ತಮ್ಮಿಂದ ತಪ್ಪಾಗಿರುತ್ತದೆ ಎಂದು ಗೊತ್ತಿದ್ದರೂ ಸಹಿತ ಈ ದೂರನ್ನು ದಾಖಲು ಮಾಡುವವರೆಗೆ ತಮ್ಮ ಮೇಲಾಧಿಕಾರಿಗಳಿಗೆ ಎಲ್ಲಿಯೂ ತಿಳಿಸಿರುವುದಿಲ್ಲ.

**25. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ-1 ಇವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ. ಆದರೆ ಆ.ಸ.ನೌ-2 ಇವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಆ.ಸ.ನೌ-1 ಇವರ ವಿರುದ್ಧ ನಕರಾತ್ಮಕವಾಗಿ ಮತ್ತು ಆ.ಸ.ನೌ-2 ಇವರ ವಿರುದ್ಧ ಸಕರಾತ್ಮಕವಾಗಿ ಉತ್ತರಿಸಿರುತ್ತೇನೆ.**

26.ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ಆ.ಸ.ನೌಕರ–1 **ಶ್ರೀ. ಜಿ ಲೋಹಿತ್**, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿಕಾರಿಪುರ (ಪ್ರಸ್ತುತ ಯಾದಗಿರಿ ಜಿಲ್ಲಾ ವಯಸ್ಕತ ಶಿಕ್ಷಣಾಧಿಕಾರಿ) ಇವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ **ವಿಫಲವಾಗಿರುತ್ತದೆ** ಮತ್ತು ಆ.ಸ.ನೌ–2 **ಶ್ರೀ. ಹೆಚ್.ಬಿ ಚಿದಾನಂದ,** ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗಾಮ ಗ್ರಾಮ ಪಂಚಾಯತ್, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ **ಸಫಲವಾಗಿರುತ್ತದೆ** ಎಂದು ನಿರ್ಣಯಿಸಲಾಗಿದೆ.

ಆ.ಸ.ನೌ–1 ರವರ ನಿವೃತ್ತಿ ದಿನಾಂಕ: 30/06/2022 ಮತ್ತು ಆ.ಸ.ನೌ–2 ರವರ ನಿವೃತ್ತಿ ದಿನಾಂಕ: 31/05/2044 ಆಗಿರುತ್ತದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. K.R Rajkumar S/o K.R Revanasiddappa, Private Constractor, Shikaripura, Shimoga. |
| | **PW-2** | Sri. Chandrappa M S/o Munishyamappa T, AEE, TAC, KLA, Bengaluru. |
| 2 | **Documents marked on behalf of the Disciplinary Authority Ex.P-1 to Ex.P-17** | |
| | **Ex.P.1 & 1(a)** | Complaint given to this institution dtd: 07/07/2016 with Signature. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4** | Documents pertaining to Ex.P.1. |
| | **Ex.P.5& 5(a)** | Investigation Report dtd: 19/06/2017 with Signature. |
| | **Ex.P.6** | Mahazar. |
| | **Ex.P.7** | Photographs. |
| | **Ex.P.8** | CD |
| | **Ex.P.9** | DD dated 04/04/2017. |
| | **Ex.P. 10** | DD dated 10/01/2017. |
| | **Ex.P. 11** | M.B Book. |
| | **Ex.P. 12** | Estimation copy for the year 2014-15. |
| | **Ex.P. 13** | Muster Roll for the year 2015-16. |

| | | |
|---|---|---|
| | **Ex.P. 14** | Action Plan. |
| | **Ex.P. 15** | Estimation copy for the year 2015-16 with copy M.B. Book. |
| | **Ex.P. 16** | Muster Roll for the year 2014-15 and FTO. |
| | **Ex.P. 17** | Muster Roll for the year 2014-15 and FTO. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Chidananda H.B S/o Basavarajappa H, PDO, Gama Gram Panchayath, Shikaripura Taluk, Shimoga District. |
| | **DW-2** | Sri. G Lohit S/o Govindappa, Education Officer, Zilla Panchayath, Shimoga. |
| 4 | **Documents marked on behalf of the DGO through the complainant** | |
| | **Ex.D.1** | Letter dtd: 21/01/2014 addressed by Commissioner, RDPR, Bengaluru. |
| | **Ex.D.2** | Circular of Commissioner, RDPR, Bengaluru dtd: 07/03/2015 with enclosures. |

Dated this the 18th November, 2021

Sd/- 18/11

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.